ಸಾನಸಿ

ತಿಂಗಳ ಪತ್ರಿಕೆ
ಜನವರಿ : 1999

- 1992 ಡಿಸೆಂಬರ್ 6ರ ನೆನಪು
- ಶಿಕ್ಷಣದ ಹಿಂದುವೀಕರಣ
- ಶಿವಸೇನೆಯವರನ್ನು ಕೆರಳಿಸಿದ ಫೈರ್
- ಬಿಡುಗಡೆಯ ಹಾದಿಯತ್ತ - ಸ್ತ್ರೀ ಸಂಘಟನೆ
- ಕಡಿಮೆ ಮನುಷ್ಯರು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 14 ಸಂಚಿಕೆ : 1

ಜನವರಿ : 1999

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ 3-00 ರೂ.

ವಾರ್ಷಿಕ ಚಂದಾ 40-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಮಾನಸ ಪ್ರತಿಗಳಿಗಾಗಿ

ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ

ವೆಂ. ವನಜ

ಎಲ್. 3, ಏಳನೇ ತಿರುವು, ವಿ.ವಿ. ವಸತಿ ಗೃಹ

ಮಾನಸ ಗಂಗೋತ್ರಿ, ಮೈಸೂರು - 570 006

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಕ್ರೈಸ್ತ ಸಂನ್ಯಾಸಿನಿಯರ ಮೇಲೆ ನಡೆಸಿದ ಅತ್ಯಾಚಾರ, ಕ್ರಿಶ್ಚಿಯನ್ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ, ಕ್ರೈಸ್ತ ಪಾದ್ರಿಯಾದ ಗ್ರಾಮ್‌ಸ್ಟೈನ್ ಅವರ ಪುಟ್ಟ ಮಕ್ಕಳ ಜೀವಂತ ದಹನ, ಮುಗ್ಧ ಆದಿವಾಸಿ ಮಕ್ಕಳ ಕೊಲೆ ಬಿಹಾರದಲ್ಲಿ ದಲಿತರ ಕಗ್ಗೊಲೆ, ಸೂರತ್ಕಲ್‌ನಲ್ಲಿನ ಹಿಂಸಾತ್ಮಕ ಘಟನೆ, ಬಾಬಾಬುಡನ್‌ಗಿರಿಯ ಸಮಸ್ಯೆ, ಇವು ನಮ್ಮ ದೇಶದಲ್ಲಿ ಸರ್ಕಾರ ಆಡಳಿತ ನಡೆಸುತ್ತಿದೆಯೆ ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ. ಜೀವಂತ ದಹನ, ಅತ್ಯಾಚಾರ, ನಿದ್ರಿಸುತ್ತಿರುವ ಹೆಂಗಸರನ್ನು, ಎಳೆಯ ಮಕ್ಕಳನ್ನು ಬಂದೂಕಿನ ನಳಿಕೆಯಿಂದ ಹತ್ಯೆಗೈದಿರುವುದು ಮತಾಂಧತೆಯ ಕ್ರೌರ್ಯ ಹಾಗೂ ಬರ್ಬರತೆಗೆ ಸಾಕ್ಷಿಯಾಗಿದೆ.

ಆಳುವ ಸರ್ಕಾರದ ಗುಪ್ತ ಸಿದ್ಧಾಂತಗಳು ಈ ಬರ್ಬರ ಕೃತ್ಯಗಳಿಗೆ ಪ್ರೇರಕ ಶಕ್ತಿಗಳಾಗಿದೆ. ಈ ಹೀನ ಕೃತ್ಯಗಳನ್ನೆಸಗಿದ ವ್ಯಕ್ತಿಗಳನ್ನು ಸರ್ಕಾರ ಬಂಧಿಸುವ ಬದಲು ದೇಶದ ಜನರ ಗಮನವನ್ನು ಬೇರೆಡೆ ಸೆಳೆಯಲು ಮತಾಂತರದ ವಿಷಯವನ್ನು ರಾಷ್ಟ್ರೀಯ ವಿವಾದಾತ್ಮಕ ಸಮಸ್ಯೆಯನ್ನಾಗಿ ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ಇದು ಸಂವಿಧಾನಾತ್ಮಕವಾಗಿ ನೀಡಿರುವ ಹಕ್ಕುಗಳ ಉಲ್ಲಂಘನೆಯಾಗಿದೆ. ಪ್ರಜಾತಾಂತ್ರಿಕ ಹಕ್ಕು ಬಾಧ್ಯತೆಗಳನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ.

ತಮ್ಮ ಧರ್ಮವನ್ನು ಬಿಟ್ಟು ಇನ್ನೊಂದು ಧರ್ಮವನ್ನು ಜನರು ಒಪ್ಪಿಕೊಳ್ಳುತ್ತಿದ್ದರೆ, ಅದನ್ನು ಯಾವ ಜನರು ಯಾಕೆ ಒಪ್ಪಿಕೊಳ್ಳುತ್ತಿದ್ದಾರೆ ಎನ್ನುವ ಮೂಲಭೂತ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ಜಾತಿ ವ್ಯವಸ್ಥೆಯ ಅಮಾನುಷತೆಯಲ್ಲಿ ನರಳುತ್ತಿರುವ ದಲಿತರು, ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಆದಿವಾಸಿಗಳು ಮತಾಂತರಗೊಳ್ಳುತ್ತಿರುವುದು ಹಿಂದೂಧರ್ಮದ ಶ್ರೇಣೀಕೃತ ವ್ಯವಸ್ಥೆಯ ಬಗ್ಗೆಯಿರುವ ಅಸಹನೆಯಿಂದ. ಈ ಅಸಹನೆಯ ಬೀಜ ಕೇವಲ ಇಂದು ಕಂಡುಬರುತ್ತಿಲ್ಲ. ಅದಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಕೋಮುವಾದಿಗಳು ಈ ಸತ್ಯಾಂಶವನ್ನು ಮರೆಮಾಚಲು ಇತಿಹಾಸವನ್ನು ತಿರುಚುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಸಂಘ ಪರಿವಾರ ಹಾಗೂ ಅದರ ಮೈತ್ರಿ ಕೂಟಗಳು ಕೇವಲ ಮುಸ್ಲಿಂರನ್ನು ಹಾಗೂ ಕ್ರಿಶ್ಚಿಯನ್‌ರನ್ನು ಮಾತ್ರ ತನ್ನ ಗುರಿಯನ್ನಾಗಿಸಿಕೊಂಡಿಲ್ಲ. ನಮ್ಮ ದೈನಂದಿನ ಜೀವನದ ಧರ್ಮ, ಶಿಕ್ಷಣ, ಕಲೆ, ಸಾಹಿತ್ಯ, ಸಿನಿಮಾ, ವಿವಿಧ ಆಯಾಮಗಳನ್ನು ನಿಯಂತ್ರಿಸುವ ಹವಣಿಕೆಯಲ್ಲಿದ್ದಾರೆ. ವೈವಿಧ್ಯತೆಯನ್ನು ಬಹುರೂಪಿ ಸಂಸ್ಕೃತಿಯನ್ನು ನಾಶಮಾಡಿ ಏಕರೂಪಿ ಸಂಸ್ಕೃತಿಯನ್ನು ಹೇರುವುದು ಅವರ ಉದ್ದೇಶವಾಗಿದೆ. ಧರ್ಮದ ಹೆಸರಿನಲ್ಲಿ ದಲಿತರನ್ನು ದಲಿತರಾಗಿಡುವ, ಸ್ತ್ರೀಯರ ಮೇಲೆ ಸೀತೆಯ ಪಾತ್ರವನ್ನು ಹೇರುವ ಹುನ್ನಾರವಿದೆ. ಸಹನೆ, ಸೌಹಾರ್ದತೆಯಿಂದ ಬದುಕುತ್ತಾ ಬಂದಿರುವ ವಿವಿಧ ಧರ್ಮದ ಸಹಬಾಳ್ವೆಯಲ್ಲಿ ದ್ವೇಷದ ಬೀಜವನ್ನು ಬಿತ್ತುವ ಯತ್ನವಿದು.

ಕೋಮುವಾದೀ ಶಕ್ತಿಗಳು, ಮತಾಂಧತೆಯ ಅಮಲಿನ ರಾಜಕೀಯ, ಗೂಂಡಾಗಿರಿಯ ಸೈನಿಕ ಸಂಸ್ಕೃತಿಯನ್ನು ನಮ್ಮ ಅಸ್ತಿತ್ವದ ಉಳಿವಿಗಾಗಿ ಪ್ರತಿಭಟಿಸಲೇಬೇಕಾಗಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರತಿಪಾದನೆಯಾಗಬೇಕಾಗಿದೆ.

1992 ಡಿಸೆಂಬರ್ 6ರ ನೆನಪು

ಸಂಘ ಪರಿವಾರದಿಂದ ಪ್ರಾಯೋಜಿಸಲ್ಪಟ್ಟ ಹಿಂಸಾತ್ಮಕ ಗುಂಪು 1992 ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ನಾಶಗೊಳಿಸಿದ್ದು ಮತೀಯ ಹುಟ್ಟಿನಲ್ಲಿ ನಡೆದ ದುರ್ಘಟನೆಗಳಲ್ಲಿ ಒಂದು. ಈ ನಾಚಿಕೆಯುತ ಘಟನೆಯು ಬಹುಜನರ ಮತಾಂಧತೆ ಹಾಗೂ ಧಾರ್ಮಿಕ ಅಸಹನೆಯ ಹಿಂಸಾತ್ಮಕ ಹಾಗು ದುಷ್ಟ ಬೆಳವಣಿಗೆಯನ್ನು ಸೂಚಿಸುತ್ತದೆ. ನಂತರದ ದಿನಗಳಲ್ಲಿ ದೇಶದ ಬಹು ಭಾಗಗಳಲ್ಲಿ ವ್ಯವಸ್ಥಿತವಾಗಿ ನಡೆದ ಕೋಮು ಘರ್ಷಣೆಗಳಲ್ಲಿ ಮುಸ್ಲಿಂರು ಮುಖ್ಯ ಗುರಿಗಳಾಗಿದ್ದಾರೆ. ರಕ್ತ ನದಿಯಂತೆ ಕೋಡಿ ಹರಿದಿದೆ. ಕೊಲೆಗಡುಕ ಶಿವಸೇನೆಯೂ ಮುಸ್ಲಿಂರ ಮೇಲೆ ನಡೆಸಿದ ಆಕ್ರಮಣವನ್ನು ತಪ್ಪಿಸಿಕೊಳ್ಳಲು ಸಾವಿರಾರು ಜನ ಬಾಂಬೆಯಿಂದ ಓಡಿಹೋಗಿದ್ದಾರೆ. ಸೂರತ್‌ನಂತಹ ಪಟ್ಟಣಗಳಲ್ಲಿ ಮುಸ್ಲಿಂ ಹೆಂಗಸರು ಹಿಂಸಿಸಲ್ಪಟ್ಟಿದ್ದಾರೆ, ಕೊಲೆ ಮಾಡಲ್ಪಟ್ಟಿದ್ದಾರೆ, ಅತ್ಯಾಚಾರಕ್ಕೊಳಗಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಂಘ ಪರಿವಾರದವರು ರೂಪಿಸುತ್ತಿರುವ ಕೋಮು ಹಿಂಸೆಯ ಘಟನೆಗಳಲ್ಲಿ ಕ್ರಿಶ್ಚಿಯನ್ ಜನಾಂಗದವರು ಗುರಿಯಾಗುತ್ತಿರುವುದು ಕಂಡುಬರುತ್ತಿದೆ. ಕಾನ್ವೆಂಟ್ ಶಾಲೆಗಳು, ಚರ್ಚುಗಳು ಹಾಗೂ ಇತರ ಕ್ರಿಶ್ಚಿಯನ್ ಸಂಸ್ಥೆಗಳ ಮೇಲೆ ಸಂಘಟಿತ ಆಕ್ರಮಣ ನಡೆಯುತ್ತಿದೆ. ಹಳ್ಳಿಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಕ್ರಿಶ್ಚಿಯನ್ ಪಾದ್ರಿಗಳು ಹಾಗೂ ನನ್‌ಗಳು ಸುಲಭವಾಗಿ ಆಕ್ರಮಣಕ್ಕೆ ಒಳಗಾಗತೊಡಗಿದ್ದಾರೆ. ಕೋಮುವಾದ ಬೆಳೆಯುತ್ತಿರುವ ಹಾಗೂ ಬಾಬರಿ ಮಸೀದಿ ನಾಶವಾಗಿರುವ ಈ ಸಂದರ್ಭದಲ್ಲಿ - 'ಮಹಿಳಾ ಜಾಗೃತಿ' ಮಹಿಳಾ ಸಂಘಟನೆಯು 1998ರ 6ನೆಯ ದಿನಾಂಕದಂದು 'ಮಹಿಳೆಯರು ಮತ್ತು ಕೋಮುವಾದ' ಎಂಬುದರ ಬಗ್ಗೆ ದಿನವಿಡೀ ವಿಚಾರ ಸಂಕಿರಣ ನಡೆಸಿತು. ಕೋಮುವಾದದ ಪ್ರಶ್ನೆಯ ಬಗ್ಗೆ ಅನೇಕರು ಮಾತನಾಡಿದುದಲ್ಲದೇ ಈ ಬಗ್ಗೆಗಿನ ಹಾಡುಗಳು, ನಾಟಕ ಹಾಗೂ ಸಿನೆಮಾವನ್ನು ತೋರಿಸಲಾಯಿತು. ಇಲ್ಲಿ ಇಬ್ಬರು ಮಾತನಾಡಿದುದನ್ನು ನಾವು ವಿವರವಾಗಿ ಬರೆಯುತ್ತಿದ್ದೇವೆ. ಕೋಮುವಾದದ ಪ್ರಶ್ನೆ ಕುರಿತು ಸುದೀರ್ಘವಾಗಿ ಮಾತನಾಡಿದ ಪಾರ್ವತಿ ಮೆನನ್ 'ಫ್ರಂಟ್‌ಲೈನ್' ಪತ್ರಕರ್ತೆ'. 'ಪ್ರಸ್ತುತದಲ್ಲಿ ಕೋಮುವಾದ' ಎಂಬ ವಿಚಾರವನ್ನು ಕರ್ನಾಟಕದ ಹಂತದಲ್ಲಿ ಈಕೆ ಮಾತನಾಡಿದರು. ಪ್ರೊಫೆಸರ್ ಆರ್. ಆರ್. ಪುನ್ಯಾನಿ 'ಮಹಿಳೆಯರು ಹಾಗೂ ಹಿಂದುತ್ವ ವಿಚಾರಧಾರೆ' ಎಂಬ ಬಗ್ಗೆ ಮಾತನಾಡಿದರು. ಕರ್ನಾಟಕದಲ್ಲಿ ಬೆಳೆಯುತ್ತಿರುವ ಕೋಮುವಾದದ ಬಗ್ಗೆ ಹಾಗೂ ಭಜರಂಗದಳ ಚಟುವಟಿಕೆಯ ಬಗ್ಗೆ ಮಾತನಾಡುತ್ತಾ ಪಾರ್ವತಿ ಮೆನನ್ ಕೆಳಗಿನ ಅಂಶಗಳತ್ತ ಗಮನ ಸೆಳೆದರು:

ಭಜರಂಗದಳ ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಅದರ ಚಟುವಟಿಕೆಗಳನ್ನು ಮುಂದುವರಿಸಿದೆ. ಭಜರಂಗದಳ ಸಂಘ ಪರಿವಾರದ ಕಾನೂನು ಬಾಹಿರ ಅಂಗ ಸಂಸ್ಥೆ. ಹಿಂದುತ್ವದ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾತ್ಮಕ ಚಟುವಟಿಕೆಗಳಿಗೆ ಇದು ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಕ್ರಿಶ್ಚಿಯನ್ ಸಂಸ್ಥೆಗಳು ಸುಲಭವಾಗಿ ಆಕ್ರಮಣಕ್ಕೆ ಒಳಗಾಗತೊಡಗಿವೆ. ಹಳ್ಳಿ/ಪಟ್ಟಣಗಳಲ್ಲಿ ಕಾನ್ವೆಂಟ್ ಶಾಲೆಗಳು ರಕ್ಷಣಾ ರಹಿತವಾಗಿರುವುದರಿಂದ ಆಕ್ರಮಣಕ್ಕೆ ಒಳಗಾಗತೊಡಗಿವೆ. ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿಯ ಮಂದಿರವು ವಿವಾದಕ್ಕೆ ಕೇಂದ್ರ ಬಿಂದುವಾಗಿದೆ. ಅಯೋಧ್ಯೆಯ ಬಾಬರಿ ಮಸೀದಿಯಂತೆ ಈ ಮಂದಿರಕ್ಕೆ ವಿವಾದಾತ್ಮಕ ಪಟ್ಟ ಕಟ್ಟುವಲ್ಲಿ ಭಜರಂಗದಳ ಮುಖ್ಯ ಪಾತ್ರ ವಹಿಸಿದೆ. ಸಂಘ ಪರಿವಾರ ಹೇಗೆ ಕೆಲಸ ಮಾಡುತ್ತಿದೆ ಎಂದು ನಮಗೆ ಅರ್ಥವಾಗಿದೆ. ಭಜರಂಗದಳದ ಕಾರ್ಯವೈಖರಿಯನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಕರ್ನಾಟಕದಲ್ಲಿ ಇದರ ಅಸ್ತಿತ್ವ ಹೇಗೆ ಮುಖ್ಯವಾಗಿದೆ? ಇದು ಮತಾಂಧತೆಯ ಹುಚ್ಚುತನದ ಪ್ರತೀಕವೇ? ಅಥವಾ ಸಂಘ ಪರಿವಾರದ ರಾಜಕೀಯ ಸಂಘಟಿಸುವಿಕೆಯ ತಂತ್ರವೆಂದು ಪರಿಗಣಿಸುವುದೆ? ನನ್ನ ಅಭಿಪ್ರಾಯದಲ್ಲಿ ಭಜರಂಗದಳವು - ಕರ್ನಾಟಕದಲ್ಲಿ ಸಂಘ ಪರಿವಾರದ ಕಾರ್ಯಕ್ರಮಗಳಿಗಾಗಿ ಹೊಸದಾಗಿ ಪ್ರಾರಂಭವಾದ ಹೊಸ ಬಾವುಟವೇ ಆಗಿದೆ.

ಬಾಬಾ ಬುಡನ್‌ಗಿರಿಯ ಮಂದಿರವನ್ನು 'ಬಿಡುಗಡೆ'ಗೊಳಿಸಬೇಕೆನ್ನುವ ಸಂಘ ಪರಿವಾರದ ಯೋಜನೆಯು ಬಿ.ಜೆ.ಪಿ.ಯವರು ಚುನಾವಣೆಯಲ್ಲಿ ಸೋತಿರುವುದರಿಂದಾಗಿ ತಲೆಕೆಳಗಾದಂತಾಗಿದೆ. ಆದರೆ ತತ್‌ಕ್ಷಣಕ್ಕೆ ಇದು ಸಂಘ ಪರಿವಾರಕ್ಕೆ ಆದ ಸೋಲಾಗಿದೆ ಅಷ್ಟೇ. ಕಳೆದ ಎರಡು ಲೋಕಸಭಾ ಹಾಗೂ ಅಸೆಂಬ್ಲಿ

ಚುನಾವಣೆಗಳಿಂದ ಬಿ.ಜೆ.ಪಿ. ತನ್ನ ಚುನಾವಣಾ ರಾಜಕೀಯದ ನೆಲೆಯನ್ನು ಕರ್ನಾಟಕದಲ್ಲಿ ಹೆಚ್ಚುಮಾಡಿದೆ. ದಕ್ಷಿಣದಲ್ಲಿ ಕರ್ನಾಟಕದಲ್ಲಿ ಮಾತ್ರ ಅವರಿಗೆ ಸ್ಥಾನವಿರುವುದರಿಂದ ಈ ರಾಜ್ಯದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವುದು ಹಾಗೂ ತಮ್ಮ ವಿಚಾರಧಾರೆಯನ್ನು ಪ್ರಬಲಗೊಳಿಸುವುದು ಬಿ.ಜೆ.ಪಿ.ಯವರಿಗೆ ಅನಿವಾರ್ಯವಾಗಿದೆ. 'ಹಿಂದುತ್ವ' ಜನರನ್ನು ಒಗ್ಗೂಡಿಸಲು ಇರುವ ಒಂದು ರಾಜಕೀಯ ತಂತ್ರವಾಗಿದೆ. ಹೀಗಿರುವ ಜನತಾದಳ ಹಾಗೂ ಕಾಂಗ್ರೆಸ್ಸಿನ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಅಧಿಕಾರ ಹೊಂದುವ ಆಸೆಯನ್ನು ಬಿ.ಜೆ.ಪಿ. ಹೊಂದಿದೆ.

ಈ ಸಂದರ್ಭದಲ್ಲಿ ನಾವು ಭಜರಂಗದಳದ ಅಸ್ತಿತ್ವವನ್ನು ಗಮನಿಸಬೇಕಾಗುತ್ತದೆ. ಇದು ಬಿ.ಜೆ.ಪಿ.ಯ ರಕ್ಷಣಾ ಘಟಕ, ಹಾಗೆಯೇ ಬಿರುಗಾಳಿ ಎಬ್ಬಿಸುವ ಘಟಕವಾಗಿದೆ. ನಾಗರಿಕ ಸಮಾಜವನ್ನು, ಅಸಹಾಯಕರನ್ನು ರಕ್ಷಿಸಲು ಇವರನ್ನು ಕಳುಹಿಸಲಾಗುತ್ತದೆ. ಅಗತ್ಯವಿರುವಲ್ಲಿ ಹಿಂಸಾತ್ಮಕ ರೀತಿಯಿಂದ ಹಿಂದುತ್ವದ ಉದ್ದೇಶಗಳನ್ನು ಜನರ ನಿತ್ಯ ಬದುಕಿನಲ್ಲಿ ತುಂಬುವಂತೆ ಇವರಿಗೆ ಹೇಳಲಾಗುತ್ತದೆ.

ಅಯೋಧ್ಯಾ ಕ್ಯಾಂಪೇನ್ ಮಾಡುವ ಮೊದಲ ವರ್ಷಗಳಲ್ಲಿ ಸಂಘ ಪರಿವಾರವು ಬಜರಂಗದಳವನ್ನು ಬಳಸಿಕೊಂಡಿತ್ತು. ಆದರೆ ಅದು ರಾಜಕೀಯ ಸಮಸ್ಯೆಯಾದ ಮೇಲೆ ಬಿ.ಜೆ.ಪಿ.ಯು ಇದನ್ನು ತನ್ನ ಕೈಗೆತ್ತಿಕೊಂಡಿತು. ಅಸಹಾಯಕ ಕಾನ್ವೆಂಟ್‌ಗಳ ಮೇಲೆ ದಾಳಿ ಮಾಡುವ ಅಥವಾ ದೈಹಿಕವಾಗಿ ಆಕ್ರಮಣ ನಡೆಸುವ ಅಥವಾ ನನ್‌ಗಳನ್ನು ಬಯ್ಯುವಂತಹ ಕೆಲಸಕ್ಕೆ ಬಿ.ಜೆ.ಪಿ. ಒಂದು ಪಕ್ಷವಾಗಿ ಕೈ ಹಾಕುವುದಿಲ್ಲ. ಆದರೆ ಭಜರಂಗದಳವನ್ನು ಅಥವಾ ಬಿರುಗಾಳಿ ಎಬ್ಬಿಸುವವರನ್ನು ಬಳಸಿಕೊಳ್ಳಲಾಗುತ್ತದೆ. ಹೀಗೆ ಪರೀಕ್ಷಿಸಿ ನಂತರ ಹೆಜ್ಜೆ ಇಡುತ್ತದೆ.

ಬಾಬಾ ಬುಡನ್‌ಗಿರಿ ಸಮಸ್ಯೆಗೆ ಸಂಬಂಧಿಸಿದ ಹಾಗೆ ಬಿ.ಜೆ.ಪಿ.ಯ ನಿಲುವನ್ನು ತೆಗೆದುಕೊಳ್ಳಿ. ಅಧಿಕೃತವಾಗಿ ಅದು ಈ ಸಮಸ್ಯೆಯಿಂದ ತನ್ನನ್ನು ದೂರವಿರಿಸಿಕೊಂಡಿರುತ್ತದೆ. ಭಜರಂಗದ ಮೂಲಕ ಅದು ರಾಜಕೀಯ ಆಯಾಮವನ್ನು ತೆಗೆದುಕೊಂಡ ಮೇಲೆ ವೇದಿಕೆಯುನ್ನು ಬಿ.ಜೆ.ಪಿ.ಗೆ ವರ್ಗಾಯಿಸಲಾಗುತ್ತದೆ. ನಂತರ ರಾಜಕೀಯ ಅರ್ಥದಲ್ಲಿ ಇದನ್ನು ಬಿ.ಜೆ.ಪಿ. ಮುಂದಕ್ಕೆ ತೆಗೆದುಕೊಂಡು ಹೋಗುತ್ತದೆ.

ಕರ್ನಾಟಕದಲ್ಲಿ ಚುನಾವಣೆಯ ಸಂದರ್ಭದಲ್ಲಿಯೇ ಭಜರಂಗದಳ ಹುಟ್ಟಿಕೊಂಡುದುದು ಕಾಕತಾಳೀಯವೇನೂ ಅಲ್ಲ. ಎರಡು ವರ್ಷಗಳ ಹಿಂದೆ ಹಂಪೆಯಲ್ಲಿ ಬಜರಂಗದಳದ ಮೊದಲ ಸಮಾವೇಶ ನಡೆಯಿತು. 5000 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಆದರೆ ಈ ವರ್ಷದ 17ರ ಜುಲೈನಲ್ಲಿಯೇ ಇದು ಕಾನ್ವೆಂಟ್‌ಗಳ ವಿರುದ್ಧ ದೊಡ್ಡ ಕ್ಯಾಂಪೇನ್‌ನನ್ನು ಸಂಘಟಿಸಿದ್ದು. ಈ ಕ್ಯಾಂಪೇನ್‌ನನ್ನು ಅತ್ಯಂತ ಸುವ್ಯವಸ್ಥಿತವಾಗಿ ಸಂಘಟಿಸಲಾಗಿತ್ತು. ಭಜರಂಗದ ಸ್ಥಳೀಯ ಘಟಕಗಳು ಕಾನ್ವೆಂಟ್‌ಗೆ ಮುತ್ತಿಗೆ ಹಾಕಿದವು. ಕೆಲವು ಸಲ ಸಂಸ್ಥೆಗಳ ಮೇಲೆ ಹಾಗು ನನ್‌ಗಳ ಮೇಲೆ ದೈಹಿಕವಾಗಿಯೂ ಸಹ ದಾಳಿ ನಡೆಸಲಾಯಿತು. ಹುಬ್ಬಳ್ಳಿ, ಬೆಂಗಳೂರು, ಬಳ್ಳಾರಿ, ಮಂಡ್ಯ ಮತ್ತು ಮಂಗಳೂರುಗಳಂತಹ ಸ್ಥಳಗಳಲ್ಲಿ ಬಜರಂಗದಳದವರು ಕಾನ್ವೆಂಟ್‌ಗಳು ಏನು ಮಾಡಬೇಕು ಹಾಗೂ ಏನು ಮಾಡಬಾರದು ಎಂಬುದರ ಬಗ್ಗೆ 12 ಅಧಿಕಾರೀ ಬೇಡಿಕೆಗಳನ್ನು ಹೊರಡಿಸಿದರು.

- ಹೆಣ್ಣು ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ಪ್ರತೀಕಗಳಾದ ಬಿಂದಿ, ಬಳೆ ಇತ್ಯಾದಿ ಧರಿಸಲು ಅವಕಾಶವಿರಬೇಕು.
- ನಿತ್ಯ ಸರಸ್ವತಿ ವಂದನ ಹಾಡಬೇಕು.
- ಕ್ರಿಶ್ಚಿಯಾನಿಟಿಗೆ ಪರಿವರ್ತನೆ ನಡೆಯಬಾರದು ಇತ್ಯಾದಿ.

ಆಶ್ಚರ್ಯಕರವಾದುದೆಂದರೆ ಕ್ರಿಶ್ಚಿಯನ್ ಸಮುದಾಯವು ಈ ರೀತಿಯ ಸನ್ನಿವೇಶಕ್ಕೆ ತುಂಬಾ ನಿಧಾನವಾಗಿ ಪ್ರತಿಕ್ರಿಯಿಸತೊಡಗಿತು. ನಾನು ಭಜರಂಗದಳದ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸುತ್ತಿದ್ದಾಗಲೂ ಸಹ ಕ್ರಿಶ್ಚಿಯನ್ ಸಮುದಾಯ ನವೆಂಬರ್ 11 ರಂದು ದೊಡ್ಡ ರ್‍ಯಾಲಿಯನ್ನು ಸಂಘಟಿಸಿದ ಮೇಲೆಯೆ ಈ ಎಲ್ಲಾ ಸಂಗತಿಗಳೂ ನಮಗೆ ತಿಳಿದಿದ್ದು. ಈ ಸಂಗತಿಗಳು ಗೊತ್ತಾದ ಮೇಲೂ ಸಹ ಬಹಳಷ್ಟು ಮಾಧ್ಯಮಗಳು ಈ ರೀತಿಯ ಸನ್ನಿವೇಶಗಳ ಬಗ್ಗೆ ಅಕ್ಷರಶಃ ನಿರ್ಲಕ್ಷ್ಯ ತೋರಿಸಿದರು.

ಬಾಬಾಬುಡನ್‌ಗಿರಿ ಕಡೆ ಕೆಲವು ವರ್ಷಗಳಿಂದ ಧಾಂದಲೆ ನಡೆಯುತ್ತಲೇ ಇದೆ. ಇಲ್ಲಿ ಆರ್.ಎಸ್.ಎಸ್. ಪ್ರಾಯೋಜಿತ ಒತ್ತಡ ಕೆಲವು ಸಲ ಹಿಂಸಾತ್ಮಕ ರೀತಿಯಲ್ಲಿಯೇ ವ್ಯಕ್ತಗೊಂಡಿದೆ. ಈ ಒತ್ತಡದಿಂದಾಗಿ ಈ ಸೂಫಿ ವಿಗ್ರಹದ ಧಾರ್ಮಿಕ ಆರಾಧನೆಯಲ್ಲಿ ಬಹಳ ಬದಲಾವಣೆ ಮಾಡಲಾಗಿದೆ. ಕೇವಲ ಹದಿನೈದು ವರ್ಷಗಳ ಹಿಂದೆಯಷ್ಟೇ, ಬಯ್ಯುವ ಮೂಲಕವೇ ವರ್ಷದ ಒಂದು ದಿನವನ್ನು "ದತ್ತಾತ್ರೇಯ ಜಯಂತಿ' ದಿನವೆಂದು ಘೋಷಿಸಿದರು. ಅಂದರೆ

ಭಜರಂಗದಳವು ದತ್ತಾತ್ರೇಯ ದಿನವನ್ನು ನಾವು ನಂಬಬೇಕೆಂಬುದಷ್ಟೇ ಅವರ ಗುರಿಯಲ್ಲ. ಈ ದಿನ ಹಿಂದೂಗಳು ಆ ವಿಗ್ರಹವನ್ನು ಪೂಜೆ ಮಾಡಬೇಕೆಂಬುದು ಇತ್ತೀಚಿನಿಂದ ನಡೆದು ಬಂದಿದೆ. ಈ ರೀತಿ ನಡೆಯುತ್ತಿರುವುದು 15 ವರ್ಷಗಳಿಂದ ಇತ್ತೀಚಿಗೆ. ಅವರು ಮಾಡುತ್ತಿರುವುದೇನೆಂದರೆ ಈ ಗುಡಿಯಲ್ಲಿ ಹಿಂದು ವಿಗ್ರಹವೊಂದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವುದು. 2 ವರ್ಷಗಳ ಹಿಂದೆ ಇವರು 'ದತ್ತಾತ್ರೇಯ ಜಯಂತಿ'ಯನ್ನು ಒಂದು ದಿನದಿಂದ ಮೂರು ದಿನಕ್ಕೆ ಹೆಚ್ಚಿಸಿದರು.

ಈ ವರ್ಷದಲ್ಲಿ ಸಂಘ ಪರಿವಾರದಿಂದ ಪ್ರಾಯೋಜಿತವಾದ ಚಟುವಟಿಕೆಗಳ ಗಾತ್ರ, ಆಕಾರಗಳಲ್ಲಿ ಹಲವಾರು ಬದಲಾವಣೆಗಳಾಗಿವೆ. ಭಜರಂಗದಳ ಈಗ ಪ್ರವೇಶಿಸಿದೆ. ಈ ವರ್ಷ ಚಿಕ್ಕಮಗಳೂರಿನಲ್ಲಿ ಇವರು 10,000 ಯುವಕರನ್ನು ಸಂಘಟಿಸುವಲ್ಲಿ ಸಮರ್ಥರಾಗಿದ್ದಾರೆ. ಅಲ್ಲಿ ಪೋಲೀಸ್ ಪಡೆಯೇ ಸೇರಿತ್ತು, ಜಾಗೃತ ದಳವೂ ಸಹ ಅಲ್ಲಿ ಇತ್ತು. ಜೊತೆಗೆ ಅಯೋಧ್ಯೆಯಲ್ಲಿ ನಡೆದ ಘಟನೆಗಳೇ ಇಲ್ಲಿ ಮರುಕಳಿಸುವುದನ್ನು ನಾವು ಕಾಣಬಹುದಿತ್ತು. ಆಡಳಿತ ವ್ಯವಸ್ಥೆಯು 'ರಥ ಯಾತ್ರ' ಮಂದಿರದೊಳಗೆ ಹೋಗುವುದಕ್ಕೆ ಅನುಮತಿ ನೀಡುವುದರ ಮೂಲಕ ಅತ್ಯಂತ ಅಪಾಯಕಾರಿಯಾದ ಸನ್ನಿವೇಶಕ್ಕೆ ಈಡುಮಾಡಿತ್ತು. ಬಹುಶಃ ಮಂದಿರವನ್ನು 'ಸ್ವತಂತ್ರ'ಗೊಳಿಸಲು ಅವರು ಪ್ರಯತ್ನ ಪಡದಿರುವುದಕ್ಕೆ ಒಂದೇ ಒಂದು ಕಾರಣವೆಂದರೆ ಇತ್ತೀಚಿನ ಚುನಾವಣೆಗಳಲ್ಲಿ ಬಿ.ಜೆ.ಪಿ. ಸೋಲನ್ನು ಅನುಭವಿಸಿದ್ದು. 'ಸ್ವಾತಂತ್ರ್ಯ ಗೊಳಿಸುವ' ಯೋಚನೆಯನ್ನು ಅವರು ಮುಂದುವರಿಸಿದ್ದರೆ ಚುನಾವಣೆಯಲ್ಲಿ ಇನ್ನಷ್ಟು ತೊಂದರೆಯನ್ನು ಅವರು ಅನುಭವಿಸುತ್ತಿದ್ದರು. ವಿಶೇಷವಾಗಿ ಉತ್ತರ ಭಾರತದಲ್ಲಿ ಇದು ನಡೆಯುತ್ತಿತ್ತು. ಅಲ್ಲಿ ಸೇರಿದ್ದ ಗುಂಪನ್ನು ಅವರ ನಾಯಕರೇ ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ. ಹಿಂಸಾತ್ಮಕ ಹಾಗೂ ಅಶ್ಲೀಲವಾಗಿರತಕ್ಕಂತಹ ಘೋಷಣೆಗಳನ್ನು ಅಲ್ಪ ಸಂಖ್ಯಾತರ ವಿರುದ್ಧ ಮುಖ್ಯವಾಗಿ ಮುಸ್ಲಿಂರ ವಿರುದ್ಧ ಕೂಗಲಾಯಿತು. ಆಡಳಿತ ವರ್ಗವು 'ಕೇಸರಿ' ಬಣ್ಣದ ಅವರ ಬಾವುಟವನ್ನು ಹಾರಿಸಲು ಅವಕಾಶ ನೀಡಿತು. ಅವರಿಗೆ ಸಭೆ ಹಾಗೂ ಪೂಜೆ ಮಾಡಲು ಅವಕಾಶ ನೀಡಲಾಯಿತು. ಭಜರಂಗದಳವು ಅಲ್ಲಿ ಇತ್ತು. ಇದರ ಭಾರತದ ಕನ್‌ವೀನರ್ ಪ್ರಕಾಶ್ ಶರ್ಮ ಕೂಡಾ ಅಲ್ಲಿ ಇದ್ದರು. ವಿಶ್ವ ಹಿಂದೂ ಪರಿಷತ್ತಿನ ರಾಜ್ಯ ಮಟ್ಟದ ನಾಯಕರು ಹಾಗೂ ಒಬ್ಬಿಬ್ಬರು ಬಿ.ಜೆ.ಪಿ.ಯ ಎಂ.ಪಿ.ಗಳೂ ಸಹ ಅಲ್ಲಿ ಇದ್ದರು. ದಿನದ ಕೊನೆಯಲ್ಲಿ 'ಗಣೇಶ' ವಿಗ್ರಹವನ್ನು ಸ್ಥಾಪಿಸಲು ಅವರಿಗೆ ಅವಕಾಶ ನೀಡಲಿಲ್ಲ. ವಿಗ್ರಹಗಳ ಮೇಲೆ ಹೊದಿಸಲಾದ ಹಳದಿ ಬಟ್ಟೆ, ಹಾರಿಸಲಾದ ಕೇಸರಿ ಬಾವುಟ, ಸ್ಥಾಪಿಸಲಾದ ದತ್ತಾತ್ರೇಯ ವಿಗ್ರಹವನ್ನು ಕೊನೆಯಲ್ಲಿ ತೆಗೆದು ಹಾಕಲಾಯಿತು. ಅವರ ಬೇಡಿಕೆಗಳು ಸ್ಪಷ್ಟವಾಗಿದ್ದವು. ನಿತ್ಯ ಮಂದಿರದಲ್ಲಿ ಪೂಜೆ ಮಾಡುವ ಅವಕಾಶ ಅವರಿಗೆ ಬೇಕಿತ್ತು. ಅವರು ಆ ಸ್ಥಳಕ್ಕೆ 'ವಿವಾದಾತ್ಮಕ' ಪಟ್ಟವನ್ನು ನೀಡಿದ್ದಾರೆ, ಜೊತೆಗೆ ಆಡಳಿತಾತ್ಮಕ ಪ್ರತಿಕ್ರಿಯೆಯನ್ನು ಅವಲಂಬಿಸಿ ತಮ್ಮ ಹೋರಾಟವನ್ನು ಮುಂದುವರಿಸಲೂ ಅವರು ಸಿದ್ಧರಿದ್ದಾರೆ.

ಈ ವಿಚಾರವನ್ನು (phenomenan) ಅರ್ಥಮಾಡಿ ಕೊಳ್ಳಲು ಪ್ರಯತ್ನಿಸಿದಾಗ ಮುಕ್ತ ಆರ್ಥಿಕ ನೀತಿ ನಾಣ್ಯದ ಕುರೂಪಿ ಮುಖವನ್ನು ಸಹ ನಾವು ನೋಡಬಹುದಾಗಿದೆ. ಭಜರಂಗದಳದ ಒಬ್ಬ ಕಾರ್ಯಕರ್ತನ ವ್ಯಕ್ತಿ ಚಹರೆ ಹೀಗಿರುತ್ತದೆ. ಆತ ಯುವಕ, ಗಂಡಸು, ದರ್ಪಿಷ್ಠ ಹಾಗೂ ಹಿಂಸಾತ್ಮಕನಾಗಿರುತ್ತಾನೆ. ಈತ ಕೆಳ ಮಧ್ಯಮವರ್ಗಕ್ಕೆ ಸೇರಿದವನಾಗಿರುತ್ತಾನೆ. ಇಲ್ಲಿನ ಹೆಚ್ಚು ಕಾರ್ಯಕರ್ತರು ಕರ್ನಾಟಕ ಚಿಕ್ಕ ಪಟ್ಟಣಗಳಿಂದ ಬಂದವರು. ಇವರು ಓದು ನಿಲ್ಲಿಸಿದವರಾಗಿರುತ್ತಾರೆ ಹಾಗೂ ಹತಾಶನಾಗಿರುತ್ತಾರೆ (frustration) ಮುಕ್ತ ನೀತಿಯಿಂದ ಲಾಭ ಹೊಂದಿದವರ ಚಿತ್ರಗಳಿಗೇ ಇವರು ಹೆಚ್ಚು ಹೆಚ್ಚು ತೆರೆದುಕೊಳ್ಳಲ್ಪಟ್ಟಿರುತ್ತಾರೆ. ತಾವು ಕಳೆದುಕೊಂಡಿದ್ದೇವೆಂದು ಅವರಿಗೆ ಮನವರಿಕೆಯಾಗಿರುತ್ತದೆ. ಈ ಪ್ರದೇಶಗಳಲ್ಲಿ ಅವರ ಉತ್ಸಾಹ/ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಕ್ರೋಢೀಕರಿಸಬಲ್ಲ ಪ್ರಜಾಸತ್ತಾತ್ಮಕ ಚಳುವಳಿಗಿಲ್ಲ. ಹಾಗಾಗಿ ಅವರು ಭಜರಂಗದಳವನ್ನು ಸೇರಿಕೊಳ್ಳುತ್ತಾರೆ. ರಾಜ್ಯ ಸರ್ಕಾರಗಳು ಸುರಕ್ಷಿತ ವಿಧಾನಗಳನ್ನು ಅಥವಾ ಪರ್ಯಾಯವನ್ನು ರೂಪಿಸಬೇಕಾದ ಜವಾಬ್ದಾರಿಯನ್ನು ಇವು ಬಿಚ್ಚಿ ತೋರಿಸುತ್ತವೆ. ಕರ್ನಾಟಕದ ಸ್ಥಿತಿಯನ್ನು ನೀವು ಇತರೇ ರಾಜ್ಯಗಳಿಗೆ ಹೋಲಿಸಿದಾಗಲೂ ಕೂಡಾ - ಕೇರಳ, ಪಶ್ಚಿಮ ಬಂಗಾಳ, ಅಥವಾ ತಮಿಳುನಾಡು - ಸಾಮಾನ್ಯ ಸ್ಥಿತಿಯನ್ನು ಸುಧಾರಿಸಲು ರಾಜ್ಯ ಸರ್ಕಾರವು ಮಾಡಿರುವ ಪ್ರಯತ್ನಗಳೇ ಕಡಿಮೆ. ಹಾಗೂ ಭಜರಂಗದಳದ ಅಸ್ತಿತ್ವವು ಹಿಂದು ಕೋಮುವಾದಿಯ ಬೆಳವಣಿಗೆ ಕರ್ನಾಟಕದಲ್ಲಿ ತಲೆ ಎತ್ತುತ್ತಿರುವುದನ್ನು ಸೂಚಿಸುತ್ತದೆ. ಉತ್ತರದಲ್ಲಿ ಸೋಲನ್ನನುಭವಿಸಿದರೂ ಸಹ ಕರ್ನಾಟಕದಲ್ಲಿ ಅವರು ಮುನ್ನಡೆಯುತ್ತಿದ್ದಾರೆ. ನನಗೆ ಗೊತ್ತು ಇದು ಎಚ್ಚರಿಕೆಯ ಒಂದು ಘಂಟೆ ಎಂದು. ಕೆಲವು ಸಂದರ್ಭದಲ್ಲಿ ಎಚ್ಚರಿಕೆಯ ಅವಶ್ಯಕತೆಯೂ ಇದೆ. ಪ್ರಾರಂಭದಿಂದಲೇ ಅವರ ಪ್ರಯತ್ನಗಳನ್ನು ಕಾನೂನುಬಾಹಿರಗೊಳಿಸುವ ಅವಶ್ಯಕತೆಗಾಗಿ

ನಾವು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಿಮ್ಮಂತಹ ಅನೇಕ ಸಂಘಟನೆಗಳನ್ನು ನಾವು ಹುಟ್ಟು ಹಾಕಬೇಕಾಗಿದೆ. ಅವರ ಪ್ರಯತ್ನಗಳನ್ನು ತಿರಸ್ಕರಿಸುವಂತೆ ಜನತೆಯ ಅಭಿಪ್ರಾಯಗಳನ್ನು ನಾವು ಸಂಘಟಿಸಬೇಕಾಗಿದೆ. ಸರ್ಕಾರದ ಅಂಗರಚನೆಗಳು ಪ್ರತಿಕ್ರಿಯಿಸುವಂತೆ ನಾವು ಒತ್ತಾಯಿಸಬೇಕಾಗಿದೆ. ಮಾಧ್ಯಮಗಳು ಪ್ರತಿಕ್ರಿಯಿಸುವಂತೆ ನಾವು ಒತ್ತಾಯಿಸಬೇಕಿದೆ. ಕರ್ನಾಟಕದಲ್ಲಿ ಮಾಧ್ಯಮಗಳು, ತೀರಾ ನಿರ್ಲಕ್ಷ್ಯ ಹೊಂದಿವೆ. ಕೊನೆಯದಾಗಿ ಹಾಗೂ ಅತ್ಯಂತ ಮುಖ್ಯವಾಗಿ ಎಲ್ಲಾ ಪ್ರಗತಿ ಪರ ಗುಂಪುಗಳೂ ಒಟ್ಟುಗೂಡಿ 'ಹಿಂದುತ್ವ'ದ ಒತ್ತಡಗಳನ್ನು ನಾವು ತಡೆಯ ಬೇಕಾಗಿದೆ.

ಬಾಂಬೆಯ IITಯ ಸಂಶೋಧಕರಾದ ಆರ್. ಆರ್. ಪುನ್ಯಾನಿ 'ಮಹಿಳೆ ಮತ್ತು ಹಿಂದುತ್ವ ವಿಚಾರಧಾರಿ' ಎಂಬ ವಿಚಾರವನ್ನು ಕುರಿತು ಮಾತನಾಡಿದರು. ಬಡವರು ಹಾಗೂ ಶೋಷಿತರು ಕೋಮುವಾದಕ್ಕೆ ಬಲಿಯಾಗುವ ಬಲಿಪಶುಗಳು ಎಂದು ಹೇಳಿದರು. ಈ ಸಮಾಜದಲ್ಲಿ ಅತ್ಯಂತ ಶೋಷಣೆಗೆ ಒಳಗಾಗಿರುವ ಮಹಿಳೆಯರು ಬೆಳೆಯುತ್ತಿರುವ ಕೋಮುವಾದದಿಂದ ಹೆಚ್ಚು ಪೆಟ್ಟು ತಿನ್ನತೊಡಗಿದ್ದಾರೆ. ಚುನಾವಣೆಗಾಗಿ ಬಿ.ಜೆ.ಪಿ.ಯು ರಾಜಕೀಯ ಪಕ್ಷವಾಗಿ ಕೋಮುವಾದದ ಜೊತೆ ಆಟವಾಡತೊಡಗಿದೆ. ಆದರೆ ಇದೇ ಪಕ್ಷವು ಮಹಿಳೆಯರ 33% ರಾಜಕೀಯ ಮೀಸಲಾತಿಗಾಗಿ ಬೆಂಬಲಿಸುತ್ತಿರುವುದನ್ನು ನಾವು ಹೇಗೆ ವಿವರಿಸುವುದು?

ಈ ಪ್ರಶ್ನೆಯನ್ನು ಒಟ್ಟು ವ್ಯವಸ್ಥೆಯಲ್ಲಿ ನಾವು ಉತ್ತರಿಸ ಬೇಕಾಗುತ್ತದೆ. ಇತ್ತೀಚಿನ ಶಿಕ್ಷಣದಲ್ಲಿ ಸುಧಾರಣೆಗಳಿಗಾಗಿ ಮಾಡಿದ ಸಲಹೆಗಳಲ್ಲಿ ಬಿ.ಜೆ.ಪಿ.ಯು 'ಹೋಂ ಸೈನ್ಸ್'ನಂತಹ ವಿಷಯಗಳನ್ನು ಹುಡುಗಿಯರಿಗೆ ಹಾಗೂ ಹೆಂಗಸರಿಗೆ ಖಡ್ಡಾಯಗೊಳಿಸಬೇಕೆಂದು ತಿಳಿಸಿದೆ. ಬಿ.ಜೆ.ಪಿ. ಹಾಗೂ ಇದರ ಅಂಗ ಸಂಸ್ಥೆಗಳಾದ ಸಂಘ ಪರಿವಾರ ಮಹಿಳಾ ವಿಮೋಚನಕ್ಕೆ ಬಲವಾದ ವಿರೋಧ ಹೊಂದಿದೆ. ಹೆಂಗಸರನ್ನು ದೇವರಂತೆ ಪೂಜಿಸುವ ಭಾರತದಂತಹ ರಾಷ್ಟ್ರಕ್ಕೆ ಮಹಿಳಾ ವಿಮೋಚನೆಯ ಅಗತ್ಯವೇನು? ಇವರು ಕೇಳುತ್ತಾರೆ.

ಭಾರತದಲ್ಲಿ ಸಾಂಪ್ರದಾಯಿಕವಾಗಿ ಹೆಂಗಸರಿಗೆ ಉನ್ನತ ಸ್ಥಾನವನ್ನು ನೀಡಲಾಗಿದೆ ಎಂಬ ಹೇಳಿಕೆಯನ್ನು ನಾವು ಜಾಗರೂಕವಾಗಿ ಪರೀಕ್ಷಿಸಬೇಕಾಗುತ್ತದೆ. ಹಿಂದಿನ ಕಾಲದ ಮಹಿಳೆಯರ ಸ್ಥಾನಮಾನ ಕುರಿತಂತಹ ಹೇಳಿಕೆ ನಮಗೆ ಮನುಸ್ಮೃತಿನಲ್ಲಿ ಸಿಗುತ್ತದೆ. ಮನುಸ್ಮೃತಿ ಮನು ಬರೆದ ಕಾಲ್ಪನಿಕ ಕಟ್ಟುಕತೆಯಲ್ಲ. ಇದು ಆ ಕಾಲದಲ್ಲಿದ್ದ ಮಹಿಳೆಯರ ಸ್ಥಿತಿ-ಗತಿ-ಕಟ್ಟು, ಪಾಡುಗಳನ್ನು ವಿವರಿಸುತ್ತದೆ. ಈ ಮನುಸ್ಮೃತಿ ಮಹಿಳೆಯರ ಬಗ್ಗೆ ಏನು ಹೇಳುತ್ತದೆ?

ಮೊದಲನೆಯದಾಗಿ ಮನುಸ್ಮೃತಿ ಹೆಂಗಸನ್ನು ಅವಲಂಬಿತ ಜೀವಿಯನ್ನಾಗಿ ನೋಡುತ್ತದೆ. ಬಾಲ್ಯದಲ್ಲಿ ತಂದೆಯ ಮೇಲೆ, ಯೌವ್ವನದಲ್ಲಿ ಗಂಡನ ಮೇಲೆ ಹಾಗೂ ವೃದ್ಧಾಪ್ಯದಲ್ಲಿ ಆಕೆ ಮಗನ ಮೇಲೆ ಅವಲಂಬಿತಳಾಗಿರುತ್ತಾಳೆ ಎಂದು ಮನುಸ್ಮೃತಿ ಹೇಳುತ್ತದೆ. ಎರಡನೆಯದು ಹೆಂಗಸರು ಗಂಡಸರ ಸೊತ್ತು ಎಂದು ಇದು ಹೇಳುತ್ತದೆ. ಹೆಂಗಸಿನ ದೇಹವನ್ನು ಭೂಮಿಗೆ ಹೋಲಿಸಲಾಗುತ್ತದೆ. ಈ ಭೂಮಿಯನ್ನು ಬಿತ್ತುವವನು ಗಂಡಸು. ಈ ಭೂಮಿಯ ಉತ್ಪಾದನೆ - ಅಂದರೆ ಮಕ್ಕಳು ಪುರುಷನ ಸೊತ್ತು. ಮನುಸ್ಮೃತಿಯು 2 (A.D.)ಶತಮಾನದ ಒಂದು ಕೃತಿ. (document) ಅಲ್ಲಿಂದ 15ನೇ (A.D.) ಶತಮಾನದವರೆಗೂ ಮುಂದುವರಿದು ಬಂದಿದೆ. ಇದರಲ್ಲಿ ನೀವೇನು ಕಾಣುತ್ತೀರಿ? ಆ ಕಾಲದ ಮಹತ್ವದ ಕವಿಯಾದ ತುಳಸೀದಾಸ ಮಹಿಳೆಯರ ಸ್ಥಾನ - ಮಾನದ ಬಗ್ಗೆ ಈ ರೀತಿ ಹೇಳುತ್ತಾನೆ : ಹಲಗೆ, ಹೆಂಗಸು ಹಾಗೂ ಶೂದ್ರ ಇವರೆಲ್ಲರು ಬಾರಿಸಲಿಕ್ಕೆ ಯೋಗ್ಯರಾದವರು. ಮಹಿಳೆಯರು ಗಂಡಸರ ಸೊತ್ತಾಗಿರುವ ಈಗಿನ ಸಂದರ್ಭ ಮನುವಿನ ಸಂದರ್ಭಕ್ಕಿಂತ ಏನೂ ಭಿನ್ನವಾಗಿಲ್ಲ. ಹಿಂದುತ್ವ ವಿಚಾರಧಾರೆಯು ಯಾವಾಗಲೂ ಮಹಿಳೆಯರಿಗೆ ಭಾರತದಲ್ಲಿ ಉನ್ನತ ಸ್ಥಾನ ಕೊಡಲಾಗಿದೆ ಎಂದು ವಾದಿಸುತ್ತದೆ. ಈ ರೀತಿಯ ವಾದದಿಂದ ಮಹಿಳೆಯರು ವಿಮೋಚನೆಗಾಗಿ ಆಶಿಸುವುದನ್ನು ತಪ್ಪು ಎಂದು ಹೇಳಲಾಗುತ್ತದೆ.

ಸ್ವಾತಂತ್ರ, ಸಮಾನತೆ ಹಾಗೂ ಸೋದರತ್ವದ ವಿಚಾರ ಧಾರೆಗಳಿಂದ ಹೆಂಗಸರ ಸ್ಥಾನ-ಮಾನದಲ್ಲಿ ಬದಲಾವಣೆಗಳಾಗ ತೊಡಗಿದವು. 'ಗಂಡಸು ಮತ್ತು ಹೆಂಡತಿ' ಎಂಬ ಪದಗಳಿಂದ 'ಗಂಡ-ಹೆಂಡತಿ' ಎಂಬ ಪದಗಳ ಬದಲಾವಣೆಗಳಲ್ಲಿ ಹೆಂಗಸಿನ ಪಾತ್ರ ಬದಲಾವಣೆ ಹೊಂದುತ್ತಿರುವುದನ್ನು ಗಮನಿಸ ಬಹುದಾಗಿದೆ.

ಭಾರತದಲ್ಲಿ ಹೆಂಗಸರ ಸ್ಥಿತಿ-ಗತಿಗಳನ್ನು ಮೊದಲಬಾರಿಗೆ ಸುಧಾರಿಸಲು ಪ್ರಯತ್ನಪಟ್ಟವರು ರಾಜಾರಾವ್ ಮೋಹನರಾಯ್. ಅವರು 'ಸತಿ' ಪದ್ಧತಿಯ ವಿರುದ್ಧ ಒಂದು ಹೋರಾಟವನ್ನು ನಡೆಸಿದರು. ಆನಂತರದಲ್ಲಿ ಹೆಂಗಸರ ಸ್ಥಿತಿ-ಗತಿಗಳನ್ನು ಸುಧಾರಿಸಲು ನಡೆದ ಹೋರಾಟಗಳನ್ನು ನಾವು ಪರೀಕ್ಷಿಸಿದರೆ ನಾವು ಎರಡು ರೀತಿಯ ವಿಚಾರ ಧಾರೆಗಳನ್ನು ಕಾಣಬಹುದಾಗಿದೆ. ಈ ವಿಚಾರಧಾರೆಗಳು ನೇರವಾಗಿದ್ದು

ಒಂದನ್ನೊಂದು ಸೇರುವುದೇ ಇಲ್ಲ. ಒಂದು ವಿಚಾರಧಾರೆಯ ನೇತಾರರು ಜ್ಯೋತಿ ಫುಲೆ, ಪಂಡಿತ ರಮಾಬಾಯಿ, ಅಂಬೇಡ್ಕರ್ ಹಾಗೂ ಇತರರು. ಇನ್ನೊಂದು ಪುರೋಗಾಮಿ ವಿಚಾರಧಾರೆ ಸಾವರ್ಕರ್ ಹಾಗೂ ಗೋಲ್‌ವಾರ್ಕರ್ ಅವರಂತಹವರದು.

ಫುಲೆ ಹಾಗೂ ಇತರರು ಹೆಂಗಸರ ಸ್ಥಾನ-ಮಾನಗಳನ್ನು ಅಭಿವೃದ್ಧಿ ಪಡಿಸಲು ಹಲವಾರು ಕೊಡುಗೆಗಳನ್ನು ನೀಡಿದರು. ಫುಲೆ ಹೆಂಗಸರು ಮನೆಯಿಂದ ಹೊರಗಡೆ ಬಂದು ಸಾಮಾಜಿಕ ನ್ಯಾಯಕ್ಕಾಗಿರುವ ಹೋರಾಟಗಳನ್ನು ಸೇರಬೇಕು ಎಂದರು. ಹೆಂಗಸರ ಶಿಕ್ಷಣದ ಅವಶ್ಯಕತೆಯ ಬಗ್ಗೆ ಇವರು ಹೋರಾಡಿದರು. ಆ ಸಂದರ್ಭದಲ್ಲಿ ಮಹಿಳೆಯರು ತಮ್ಮ ಮನೆಯಿಂದ ಈಚೆ ಬಂದು ಚಳುವಳಿಗಳಲ್ಲಿ ಭಾಗವಹಿಸ ತೊಡಗಿದ್ದರು. ಮೊದಲ ಮಹಿಳಾ ವೈದ್ಯೆ, ಶಿಕ್ಷಕಿ ಕೂಡಾ ಈ ಸಂದರ್ಭದಲ್ಲಿ ಇದ್ದರು. ಹಿಂದೂ ಕೋಡ್ ಬಿಲ್ ರೂಪಿಸುವಲ್ಲಿ ನಾವು ಅಂಬೇಡ್ಕರ್‌ರವರ ಕೊಡುಗೆಯನ್ನು ಗಮನಿಸಬೇಕು. ಹಿಂದೂ ಕೋಡನ್ನು ರೂಪಿಸುವಾಗ ಅಂಬೇಡ್ಕರ್‌ರವರು ಸಾಧ್ಯವಾದಷ್ಟು ಮಟ್ಟಿಗೆ ಮಹಿಳೆಯರಿಗೆ ನ್ಯಾಯ ಒದಗಿಸಲು ಪ್ರಯತ್ನಿಸಿದರು. ಹಿಂದೂತ್ವದ ಪ್ರತಿಪಾದಕರಿಂದ ಹಾಗು ನೆಹರುರವರ ಕ್ಯಾಬಿನೆಟ್‌ನಲ್ಲಿದ್ದ ಪ್ರತಿಗಾಮಿಗಳಿಂದ ಅಂಬೇಡ್ಕರ್‌ರವರ ಪ್ರಯತ್ನಗಳಿಗೆ ಹೆಚ್ಚು ವಿರೋಧಗಳು ಕಂಡು ಬಂದವು. ಈ ವಿರೋಧಗಳು ಎಷ್ಟು ಬಲವಾಗಿದ್ದವೆಂದರೆ ಅಂಬೇಡ್ಕರ್‌ರವರು ಹತಾಶೆಯಿಂದಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು.

1960ರಲ್ಲಿ ಮಥುರಾ ಅತ್ಯಾಚಾರ ಪ್ರಕರಣ ನಡೆಯಿತು. ಈ ಹಂತದಲ್ಲಿ ಮಹಿಳಾ ಚಳುವಳಿ ಭಾರತದ ಎಲ್ಲೆಡೆಯೂ ಹರಡತೊಡಗಿತು. ಸಮಾಜದ ಮಹಿಳೆಯರ ಆಶೋತ್ತರಗಳನ್ನು ಇದು ಪ್ರತಿನಿಧಿಸಲಾರಂಬಿಸಿತು.

ಇನ್ನೊಂದು ವಿಚಾರಧಾರೆಯನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದವರು ಸಾವರ್‌ಕರ್, ಗೋಲ್‌ವಾರ್‌ಕರ್ ಹಾಗೂ ಇತರ ಹಿಂದೂ ಪ್ರತಿಗಾಮಿಗಳು. ಈ ಜನರು ಮಹಿಳೆಯರನ್ನು ಹೇಗೆ ನಡೆಸಿಕೊಳ್ಳುತ್ತಿದ್ದರು ಎಂಬುದಕ್ಕೆ ಇತಿಹಾಸದಿಂದ ಒಂದು ಉದಾಹರಣೆಯನ್ನು ನಾನು ನಿಮಗೆ ನೀಡುತ್ತೇನೆ. ಮರಾಠಾ ರಾಜನಾದ ಶಿವಾಜಿ ಮಹಿಳೆಯರನ್ನು ಅಧಿಕವಾಗಿ ಗೌರವಿಸುತ್ತಿದ್ದನು. ಯುದ್ಧವೊಂದರಲ್ಲಿ ಗೆದ್ದಾದ ನಂತರ ಬಾಸಿನ್ ರಾಜನ ಸೊಸೆಯನ್ನು ಶಿವಾಜಿಯ ಹತ್ತಿರ ತರಲಾಯಿತು. ಆಕೆಯ ಸೌಂದರ್ಯವನ್ನು ಹೊಗಳುತ್ತಾ ಹಾಗೂ ಆಕೆಯನ್ನು ನೋಡುತ್ತಾ ಆತ ಹೇಳಿದ : "ನನ್ನ ತಾಯಿ ನಿನ್ನಷ್ಟು ಸುಂದರಿಯಾಗಿದ್ದಿದ್ದರೆ ನಾನು ಕೂಡ ಸುಂದರನಾಗಿರುತ್ತಿದ್ದೇನೋ".

ಶಿವಾಜಿಯ ಈ ನಡತೆಯನ್ನು ಟೀಕಿಸುತ್ತಾ ಸಾವರ್‌ಕರ್ ಹೀಗೆ ನುಡಿದರು : ಮುಸ್ಲಿಂರು ನಮ್ಮ ಹೆಂಗಸರ ಮೇಲೆ ಅತ್ಯಾಚಾರ ನಡೆಸಿದರು. ಆದರೆ ಶಿವಾಜಿಯು ಮುಸ್ಲಿಂರಿಗೆ ಪಾಠ ಕಲಿಸಲು ಹೀಗೆ ಮಾಡಿದನು". ಆತ ಹೇಳಬೇಕಾಗಿದ್ದ ವಿಚಾರವೆಂದರೆ ಹಿಂದು ಗೌರವವನ್ನು ಕಾಪಾಡಲು ಹಾಗೂ ಹಗೆ ತೀರಿಸಿಕೊಳ್ಳಲು ಶಿವಾಜಿಯು ಆ ಹೆಂಗಸಿನ ಮೇಲೆ ಅತ್ಯಾಚಾರ ಮಾಡಬೇಕಿತ್ತು. ಹಿಂದೂ ಕೋಮುವಾದಿಗಳ ಪ್ರಕಾರ ಮಹಿಳೆಯರು ಸಮುದಾಯದ ಗೌರವದ ಪ್ರತಿನಿಧಿಗಳು/ ಮೇಲ್ವಿಚಾರಕರು. ಗೋಲ್‌ವಾರ್‌ಕರ್ ಕೂಡಾ ಇದೇ ವಿಚಾರಧಾರೆಯ ಇನ್ನೊಬ್ಬ ದೊಡ್ಡ ಪ್ರತಿಗಾಮಿ. ಹೆಣ್ಣು ಗಂಡನನ್ನು ಭಿನ್ನವಾಗಿ ಸೃಷ್ಟಿಸುವ ಮೂಲಕ ಪ್ರಕೃತಿಯು ಹೆಣ್ಣು ಹಾಗೂ ಗಂಡಿಗೆ ಭಿನ್ನವಾದ ಸ್ಥಾನಗಳನ್ನು ಕಲ್ಪಿಸಿದೆ ಎಂದು ಈತ ಹೇಳುತ್ತಾನೆ. ಈತ ಹೇಳುವ ಪ್ರಕಾರ ಸಮಾನತೆ ಮುಖ್ಯವಲ್ಲ, ಸಾಮರಸ್ಯ ಮುಖ್ಯ. ಮಕ್ಕಳನ್ನು ಹೆರುವುದು, ಹಿಂದೂ ಸಂಸ್ಕಾರಗಳನ್ನು ರಕ್ಷಿಸುವುದು - ಇವು ಮಹಿಳೆಯರ ಕೆಲಸಗಳಾಗಿರುತ್ತವೆ.

ಮನು ಚರಿತ್ರೆಯಿಂದ ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ರಾಷ್ಟ್ರೀಯ ಸ್ವಾಮಿ ಸೇವಕ್ ಸಂಘಟನದ ಗಂಡಸರ ಕೆಲವು ಹೆಂಗಸು ಸಂಬಂಧಿಕರು ತಾವು ಆರ್.ಎಸ್.ಎಸ್. ಸೇರುವ ಮೂಲಕ ರಾಷ್ಟ್ರ ಕಟ್ಟುವ ಹಂತದ ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಆಸೆ ವ್ಯಕ್ತಪಡಿಸಿದರು. ಆದರೆ ಆರ್.ಎಸ್.ಎಸ್. ಗಂಡಸರ ಸಂಘವಾದ್ದರಿಂದ ಹೆಂಗಸರಿಗೆ ಅವಕಾಶವಿಲ್ಲ ಎಂದು ಹೇಳಲಾಯಿತು. ಆನಂತರ ಅವರು ಪ್ರತ್ಯೇಕ ರಾಷ್ಟ್ರೀಯ ಸೇವಿಕಾ ಸಮಿತಿ ರಚಿಸಬೇಕೆಂದು ಅವರಿಗೆ ಹೇಳಲಾಯಿತು. ಅದರಿಂದ ಒಂದು ಮುಖ್ಯ ಹಾಗೂ ಸೂಕ್ಷ್ಮವಾದ ಸಂಗತಿ ನಮಗೆ ಅರ್ಥವಾಗುತ್ತದೆ. ಗಂಡಸರು ಸಂಘಟಿತರಾದಾಗ ಅವರು 'ಸ್ವಾಮಿ ಸೇವಕ ದಳ'ವನ್ನು ಕಟ್ಟಿದರು. 'ಸ್ವಾಮಿ ಸೇವಕ' ಎನ್ನುವ ಪದ ಸ್ವಯಂ ಇಚ್ಛೆಯ ಚಟುವಟಿಕೆಯನ್ನು ಸೂಚಿಸುತ್ತದೆ. ಮಹಿಳೆಯರು 'ಸೇವಿಕಾ ದಳ' ಅಥವಾ 'ಸೇವಕರ' ಸಂಘಟನೆ ಮಾತ್ರ ರಚಿಸಬಹುದಾಗಿತ್ತು. ಗಂಡಸರು ಸ್ವಯಂ ಇಚ್ಛೆಯವರಾಗಿ ಸಂಘಟಿತರಾದರೆ ಹೆಂಗಸರು ಕೇವಲ ಸೇವಕರಾಗಬಹುದಿತ್ತು ಮಾತ್ರ. ರಾಷ್ಟ್ರೀಯ ಸೇವಿಕಾ ದಳದ ಮುಖ್ಯ ಗುರಿಯೆಂದರೆ ರಾಷ್ಟ್ರವನ್ನು ರಕ್ಷಿಸುವ ಹೊಣೆ ಹೊತ್ತ ಗಂಡಸರಿಗೆ ಬೆಂಬಲ ನೀಡುವುದು.

ಈಗ ನಾವು ಬಿ.ಜೆ.ಪಿ. ಮಹಿಳಾ ಮೋರ್ಚದ ಬಗ್ಗೆ ನೋಡೋಣ. ಇದು ಬಿ.ಜೆ.ಪಿ.ಯ ಅಂಗ ಸಂಸ್ಥೆ. 1993ನಲ್ಲಿ ಟೆಲಿಗ್ರಾಫ್‌ನವರು ಮಹಿಳಾ ಮೋರ್ಚಾದ ನಿರ್ವಾಹಕರನ್ನು ಸಂದರ್ಶನ ಮಾಡಿದ್ದರು. ಆಕೆ ಸಂದರ್ಶನದ ಅವಧಿಯಲ್ಲಿನ ಅಭಿಪ್ರಾಯಗಳನ್ನು ಪರಿಶೀಲಿಸಬೇಕು. ವರದಕ್ಷಿಣೆ ಪದ್ಧತಿಯ ಬಗ್ಗೆ ಆಕೆ ಈ ಪದ್ಧತಿ ಕೆಟ್ಟುದ್ದು, ಆದರೆ ಏನು ಮಾಡೋಕೆ ಆಗುತ್ತೆ ಎನ್ನುತ್ತಾರೆ. ಆಕೆ ತನ್ನ ಮಗಳಿಗೆ ವರದಕ್ಷಿಣೆ ಯನ್ನಿತ್ತಿದ್ದಾಳೆ ಹಾಗೂ ಮಗನ ಮದುವೆಯಲ್ಲಿ ವರದಕ್ಷಿಣೆ ಸ್ವೀಕರಿಸಿದ್ದಾಳೆ. ಹೆಂಡತಿಯನ್ನು ಹೊಡೆಯುವ ಬಗ್ಗೆ ಮಾತನಾಡುತ್ತಾ - ಹೆಂಡತಿಯನ್ನು ಹೊಡೆಯುವುದು ತಪ್ಪು. ಆದರೆ ಗಂಡಸರು ಏನು ಮಾಡುವುದಕ್ಕಾಗುತ್ತದೆ? ಕೆಲವು ಸಂದರ್ಭದಲ್ಲಿ ಗಂಡಸು ತನ್ನ ಹೆಂಡತಿಯನ್ನು ಹದ್ದುಬಸ್ತಿನಲ್ಲಿ ಇಡಲು ಹೊಡೆಯಬೇಕಾಗುತ್ತದೆ. ಹೆಂಗಸಾದವಳು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬಾರದು, ಆಕೆ ಕುಟುಂಬದ ನಿರ್ಧಾರಗಳಿಗೆ ಬದ್ಧಳಾಗಿರಬೇಕು ಎಂದೂ ಕೂಡಾ ಆಕೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಳು. ಆರ್.ಎಸ್.ಎಸ್. ದೊಡ್ಡ ವ್ಯಕ್ತಿಯಾದ ವಿಜಯ ರಾಜೇ ಸಿಂಧ್ಯಾರ ಪಾತ್ರವನ್ನು ಗಮನಿಸಿ.

ರೂಪ ಕನ್ವರಳ 'ಸತಿ' ಸಂದರ್ಭದಲ್ಲಿ ಎಲ್ಲಾ ಮಹಿಳಾ ಗುಂಪುಗಳು ಈ 'ಸತಿ' ಪದ್ಧತಿ 'ಪುನಶ್ಚೇತನ'ಗೊಳ್ಳುತ್ತಿರುವ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿರುವ ಸಂದರ್ಭದಲ್ಲಿ ವಿಜಯಾ ರಾಜೇ ಸಿಂಧ್ಯಾ ಸಾರ್ವಜನಿಕವಾಗಿ ಕೇಳಿದರು, "ನಮ್ಮ ಹಿಂದೂ ಸಂಪ್ರದಾಯಗಳನ್ನು ವಿರೋಧಿಸುತ್ತಿರುವ ಈ ಪಾಶ್ಚಿಮಾತ್ಯ ಪ್ರಭಾವದ ಮಹಿಳಾ ಗುಂಪುಗಳು ಯಾರು? ಇಷ್ಟೇ ಅಲ್ಲ, ಸತಿ ಪದ್ಧತಿಯನ್ನು ಬೆಂಬಲಿಸಿ ಈಕೆ ದೆಹಲಿಯಲ್ಲಿ ಮೆರವಣಿಗೆಯೊಂದನ್ನು ಹೊರಡಿಸಿದರು. ಈ ಮೆರವಣಿಗೆಯ ಸಂದರ್ಭದಲ್ಲಿ ಸತಿ ಪದ್ಧತಿ ಭಾರತೀಯ ಸಂಸ್ಕೃತಿಯ ವೈಭವಯುತವಾದ ಸಂಪ್ರದಾಯ ಎಂಬ ಘೋಷಣೆಯನ್ನು ಸಹ ಕೂಗಲಾಯಿತು. ಯಾರು ಸತಿ ಪದ್ಧತಿ ವಿರೋಧಿಸುವರೋ ಅವರೆಲ್ಲಾ ಭಾರತದ ಹಾಗೂ ರಾಷ್ಟ್ರದ ವಿರೋಧಿಗಳು ಎಂದು ಹೇಳಲಾಯಿತು. ಬಾನ್ವರಿದೇವಿಯ ಅತ್ಯಾಚಾರ ಪ್ರಕರಣ ಕೂಡ ನಮಗೆಲ್ಲ ಪರಿಚಿತವಾದದ್ದೇ. ಬಾನ್ವರಿದೇವಿ ರಾಜಸ್ತಾನದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದಲ್ಲಿರುವ ಸಾಥಿನ್. ಆಕೆ ತನ್ನ ಸಮುದಾಯದಲ್ಲಿನ ಬಾಲ್ಯ ವಿವಾಹ ಪದ್ಧತಿಯ ರದ್ಧತಿಗಾಗಿ ಕೆಲಸ ಮಾಡುತ್ತಿದ್ದಳು. ಆಕೆಗೆ ಪಾಠ ಕಲಿಸುವುದಕ್ಕಾಗಿ ಮೇಲ್ವರ್ಗಕ್ಕೆ ಸೇರಿದ ಕೆಲವರು ಆಕೆಯ ಮೇಲೆ ಅತ್ಯಾಚಾರ ನಡೆಸಿದರು. ವಿಚಾರಣೆಯಲ್ಲಿ ಅವರನ್ನು ಬಿಡುಗಡೆ ಗೊಳಿಸಿದುದಷ್ಟೇ ಅಲ್ಲ, ಸಂಘ ಪರಿವಾರ ಸಂಘಟಿಸಿದ ಸಭೆಯೊಂದರಲ್ಲಿ ಸಾರ್ವಜನಿಕವಾಗಿ ಅವರನ್ನು ಸನ್ಮಾನಿಸ ಲಾಯಿತು.

ಇಲ್ಲಿಯವರೆಗೆ ವಿವರಿಸಲಾದ ವಿಚಾರಗಳಿಂದ ತಿಳಿಯುವುದೇನೆಂದರೆ ಹಿಂದೂತ್ವ ಹೆಂಗಸರನ್ನು ಸಂಕೀರ್ಣವಾದ ರೀತಿಯಲ್ಲಿ ನೋಡುತ್ತದೆ. ಲಿಂಗಾಧಾರಿತ ಶ್ರೇಣೀಕೃತ ವ್ಯವಸ್ಥೆಯು ಬೇರೆ ಬೇರೆ ರೀತಿಯ ಒತ್ತಡಗಳಿಂದಾಗಿ ಇಂದು ಮುರಿದು ಬೀಳತೊಡಗಿದೆ. ಮಹಿಳಾ ಚಳುವಳಿಯಿಂದ ಕೂಡಾ ಒತ್ತಡ ಬರತೊಡಗಿದೆ. ಇಲ್ಲಿ ಬಲವಾದ ಕೋಮುವಾದಿ ಶಕ್ತಿ ಬೆಳೆದಿದೆ. ಉದಾಹರಣೆಗೆ ಪಕ್ಕದ ದೇಶವಾದ ಆಫ್‌ಘಾನಿಸ್ತಾನದಲ್ಲಿ ತಾಲಿಬಾನ್ ಜಾರಿಯಲ್ಲಿದೆ. ಇದು ಮಹಿಳೆಯರ ಬದುಕನ್ನು ನೇರವಾಗಿ ಹಾಗೂ ಹಿಂಸಾತ್ಮಕವಾಗಿ ಬಂಧಿಸತೊಡಗಿದೆ. ಇವರು ಹೆಂಗಸರಿಂದ ಗುಲಾಮಗಿರಿಯನ್ನು ನಿರೀಕ್ಷಿಸಿ ಒತ್ತಾಯಿಸುತ್ತಾರೆ. ಹಿಂದುತ್ವ ತಾಲಿಬಾನ್‌ಗಿಂತ ಅಪಾಯಕಾರಿಯಾಗಿರುವ ಅಂಶ. ತಾಲಿಬಾನ್ ಪ್ರಕರಣದಲ್ಲಿ ಅವರು ಹೆಂಗಸರನ್ನು ಬಂಧಿಸುತ್ತಿದ್ದಾರೆಂಬ ನಿಜ ಮುಕ್ತವಾಗಿಯೇ ತಿಳಿಯುತ್ತದೆ. ಆದರೆ ಹಿಂದುತ್ವದ ಒತ್ತಡಗಳು ಸೂಕ್ಷ್ಮವಾಗಿ ಹೆಂಗಸರನ್ನು ಬಂಧಿಸಲು ಪ್ರಯತ್ನ ಪಡುತ್ತದೆ. ಅವರು ಬಳಸುವ ಭಾಷೆ ನವಿರಾದದ್ದು ಹಾಗೂ ಆಧುನಿಕ ವಾದದ್ದು. ಕೋಮುವಾದಕ್ಕೆ ಹೆಂಗಸರು ನೇರವಾಗಿ ಬಲಿಪಶುಗಳಾಗುತ್ತಿದ್ದಾಗಲೂ ಸಹ, ಮಧ್ಯಮ ವರ್ಗದ ಹೆಂಗಸರನ್ನು ಹಿಂದುತ್ವ ವಿಚಾರಧಾರೆಗೆ ಎಳೆದುಕೊಳ್ಳಲಾಗುತ್ತಿದೆ. ಬರಿಯ ವಿಚಾರಧಾರೆಯ ಹಂತದಲ್ಲಿ ಮಾತ್ರವಲ್ಲ, ಕೆಲವು ಸಂದರ್ಭದಲ್ಲಿ ಕೋಮುವಾದದ ಹಿಂಸೆಯ ನೇರ ಪ್ರತಿಪಾದಕ ರಾಗಿಯೂ ಕೂಡಾ ಮಹಿಳೆಯರನ್ನು ಸಂಘಟಿಸಲಾಗಿದೆ.

ಮೂರು ತಿಂಗಳ ಹಿಂದೆ ಮುಂಬೈನ ದಾದರ್‌ನಲ್ಲಿ ನಡೆದ ಸಭೆಯೊಂದರಲ್ಲಿ ಪುರುಷರು 'ಪುರುಷ ಹಕ್ಕು ಸಂರಕ್ಷಣಾ ಸಮಿತಿ' ಎಂಬ ಬ್ಯಾನರ್ ಕೆಳಗಡೆ ಕೌಟುಂಬಿಕ ಹಿಂಸೆಗಾಗಿ ತಮ್ಮ ಮೇಲೆ ಸುಳ್ಳು ಆರೋಪ ಹೊರಿಸಿರುವ ಹೆಂಗಸರಿಂದ ರಕ್ಷಿಸಬೇಕು ಎಂದು ಒತ್ತಾಯಿಸುತ್ತಿದ್ದರು. ಮಹಿಳಾ ಚಳುವಳಿಯ ಬೆಳವಣಿಗೆಯ ಜೊತೆ ಕೋಮುವಾದ - ಪಿತೃಪ್ರಾಧಾನ್ಯತೆಯ ಮರು ಹೊಡೆತ (Back Lach)ಗಳು ಕೂಡಾ ಬೆಳೆಯ ತೊಡಗಿವೆ. ಈ ಸಂಕೀರ್ಣ ವಿಚಾರವನ್ನು ಅರ್ಥ ಮಾಡಿಕೊಂಡು ನಾವು ಹೋರಾಡಬೇಕಾಗಿದೆ.

●

ಶಿಕ್ಷಣದ ಹಿಂದುವೀಕರಣ

ಇತ್ತೀಚೆಗೆ ನಡೆದ ರಾಜ್ಯ ವಿದ್ಯಾಮಂತ್ರಿಗಳ ಸಮಾವೇಶದಲ್ಲಿ ಕಾರ್ಯಸೂಚಿಯ ಭಾಗವಾಗಿ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಭಾರತೀಕರಣ, ರಾಷ್ಟ್ರೀಕರಣ, ಆಧ್ಯಾತ್ಮೀಕರಣಗೊಳಿಸುವ ಸಲಹೆಯನ್ನು ಸೇರಿಸಲಾಗಿದೆ. ಈ ಶಿಫಾರಸ್ಸುಗಳು ರಾಷ್ಟ್ರಾದ್ಯಂತ ಬಿರುಗಾಳಿಯನ್ನೇ ಎಬ್ಬಿಸಿದೆ. ಬಿ.ಜೆ.ಪಿ. ಸರ್ಕಾರ್ಕಕ್ಕೆ ಬೆಂಬಲ ನೀಡಿದ ಪಕ್ಷಗಳೆಲ್ಲವೂ ಪಕ್ಷದ ಹೊಂದಾಣಿಕೆಯನ್ನು ಮರೆತು ಕೇಸರೀಕರಣವನ್ನು, ಸರಸ್ವತಿ ವಂದನೆಯೊಂದಿಗೆ ಸಮಾವೇಶ ಪ್ರಾರಂಭವಾದದ್ದನ್ನೂ ವಿರೋಧಿಸಿ ಸಮಾವೇಶದಿಂದ ಹೊರಬಂದರು. ಮುಜುಗರಗೊಂಡ ಬಿ.ಜೆ.ಪಿ.ಯು ಒತ್ತಾಯ ಪೂರ್ವಕವಾಗಿ ತನ್ನ ಸಲಹೆಯನ್ನು ಸಮಾವೇಶ ಪ್ರಾರಂಭವಾಗುವ ಮೊದಲೇ ಕೈ ಬಿಡಬೇಕಾಯಿತು. ಕೇಂದ್ರ ಮಾನವ ಸಂಪನ್ಮೂಲ ಮಂತ್ರಿ ಮುರಳಿ ಮನೋಹರಜೋಷಿ, ಆರ್.ಎಸ್.ಎಸ್. ಸದಸ್ಯ ಬಿ.ಜೆ.ಪಿ.ಯ ವಕ್ತಾರ ವಿವಾದಾತ್ಮಕ ಕಾರ್ಯಸೂಚಿಯನ್ನು ಬಲವಾಗಿ ಸಮರ್ಥಿಸಿ ಕೊಂಡಿದ್ದಲ್ಲದೆ, ಎಲ್ಲಾ ಸರ್ಕಾರಿ ಕಾರ್ಯಕ್ರಮಗಳು ಸರಸ್ವತಿ ವಂದನೆಯೊಂದಿಗೆ ಪ್ರಾರಂಭವಾಗಬೇಕೆಂದು ಹೇಳಿದ್ದರು. ಈ ಸಲಹೆಯನ್ನು ವಿರೋಧಿಸುವ ರಾಜ್ಯದ ವಿದ್ಯಾಮಂತ್ರಿಗಳು ತಮ್ಮ ಇಲಾಖೆ ಯನ್ನು ತ್ಯಜಿಸಬೇಕು ಎಂಬ ಮಾತನ್ನು ಸಮಾವೇಶದಲ್ಲಿ ದಾಖಲುಗೊಳಿಸಿದರು. ಈ ವಿವಾದತ್ಮಕ ಶಿಫಾರಸ್ಸು ಪ್ರಾಥಮಿಕ ತರಗತಿಯಿಂದ ಕಡ್ಡಾಯಗೊಳಿಸುವುದು, ಮನೆಯನ್ನು ಸುವ್ಯವಸ್ಥಿತವಾಗಿ ಇಡುವುದು ಹಾಗೂ "ನೈತಿಕ" ನಡತೆಯನ್ನು ಕಡ್ಡಾಯಗೊಳಿಸುವುದು, ಶಿಕ್ಷಕರಿಗೆ ಭಾರತೀಕರಣಕ್ಕೆ ಸಂಬಂಧ ಪಟ್ಟಂತೆ ತರಬೇತಿ ನೀಡುವುದು ಮುಂತಾದ ಸಲಹೆಗಳನ್ನು ನೀಡಲಾಗಿದೆ.

ಈ ಸಲಹೆಗಳು ಆರ್.ಎಸ್.ಎಸ್.ನ ಬಹು ಮುಖ್ಯ ಸದಸ್ಯರಿಂದ ಬಂದಿದ್ದರಿಂದ ಭಾರತೀಕರಣವೆಂದರೆ ಆರ್.ಎಸ್.ಎಸ್.ನ ವಿಚಾರಧಾರೆ ಎಂಬುದು ತುಂಬಾ ಸ್ಪಷ್ಟವಾಗಿದೆ. ಮಿಜೋರಾಂನ್ನು ಹೊರತು ಪಡಿಸಿ ಆರ್.ಎಸ್.ಎಸ್.ನ ಸ್ಕೂಲು ನಡೆಸುವ ಇತರ ರಾಜ್ಯಗಳ ಎಲ್ಲಾ ಸ್ಕೂಲುಗಳಲ್ಲಿ ಈ ಹಿನ್ನೆಲೆಯಲ್ಲಿಯೇ ವಿದ್ಯಾಭ್ಯಾಸವನ್ನು ನೀಡಲಾಗುತ್ತದೆ. ಹಿಂದೂ ರಾಷ್ಟ್ರ ಪರಿಕಲ್ಪನೆಯೇ ಇದರ ದೃಷ್ಟಿಕೋನವಾಗಿದೆ.

ಮೇಲ್ಜಾತಿಯ ಸಾರ್ವಭೌಮತ್ವದ ಹಿಂದೂ ವ್ಯವಸ್ಥೆಯನ್ನು ಹೇರುವುದೇ ಇವುಗಳ ಉದ್ದೇಶವಾಗಿದೆ.

ಆಕ್ರಮಣಶೀಲ ಕ್ಷತ್ರಿಯ ಹಾಗೂ ಬ್ರಾಹ್ಮಣ ಸಂಸ್ಕೃತಿಯನ್ನು ತೀವ್ರಗತಿಯಲ್ಲಿ ಹೇರುವ ದೃಷ್ಟಿಯಿಂದ ಇತಿಹಾಸದ ಆಯ್ದ ಭಾಗವನ್ನು ವ್ಯಾಖ್ಯಾನಿಸಲಾಗುತ್ತಿದೆ. ಇದರ ಮೂಲಕ ಅಲ್ಪಸಂಖ್ಯಾತರ ಸಂಸ್ಕೃತಿಗೆ ಮಸಿ ಹಚ್ಚಲಾಗುತ್ತಿದೆ. 1991ರಲ್ಲಿ ಬಿ.ಜೆ.ಪಿ. ಉತ್ತರ ಪ್ರದೇಶ, ರಾಜಾಸ್ಥಾನ, ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಈ ರಾಜ್ಯಗಳಲ್ಲಿ ಆರ್.ಎಸ್.ಎಸ್.ನ ವಿಚಾರಧಾರೆ ಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾಂಸ್ಥೀಕರಣಗೊಳಿಸಲಾಯಿತು. ವ್ಯವಸ್ಥಿತವಾಗಿ ಇತಿಹಾಸವನ್ನು ತಿರುಚಲಾಗುತ್ತಿದೆ. ಅಕ್ಬರ್ ಹಾಗೂ ಇತರ ಮುಸ್ಲಿಂ ಆಡಳಿತಗಾರರನ್ನು ಕಪ್ಪು ಛಾಯೆಯಲ್ಲಿ ಚಿತ್ರಿಸಲಾಗಿದೆ. ಪಠ್ಯಪುಸ್ತಕಗಳಲ್ಲಿ ಮತಾಂಧತೆಯ ಬೀಜವನ್ನು ಪ್ರಾಥಮಿಕ ಹಂತದಿಂದ ಎಳೆಯ ಮಕ್ಕಳ ಮನಸ್ಸಿನ ಮೇಲೆ ಬಿತ್ತಲಾಗುತ್ತಿದೆ.

ಉತ್ತರ ಪ್ರದೇಶದಲ್ಲಿ ಸರಸ್ವತಿ ವಂದನೆಯ ಪ್ರಾರ್ಥನೆಯನ್ನು ಸ್ಕೂಲು ಕಾಲೇಜುಗಳಲ್ಲಿ ಕಡ್ಡಾಯ ಗೊಳಿಸಲಾಗಿತ್ತು. ಮುಸ್ಲಿಂ ಮಕ್ಕಳು ಸರಸ್ವತಿ ವಂದನೆಯನ್ನು ಸರಿಯಾಗಿ ಉಚ್ಚಾರ ಮಾಡಲಾಗದಿದ್ದಾಗ ಅವರನ್ನು ಗೇಲಿ ಮಾಡಲಾಗುತ್ತಿತ್ತು. ಮಧ್ಯ ಪ್ರದೇಶದಲ್ಲಿ ಪಠ್ಯಪುಸ್ತಕಗಳ ಸುಧಾರಣೆಯಲ್ಲಿ ವರ್ಗ, ಜಾತಿ, ಲಿಂಗಭೇದಗಳನ್ನು ಮುಕ್ತಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ 'ಏಕಲವ್ಯ' ಸಾಮಾಜಿಕ ಸಂಸ್ಥೆಯ ಮೇಲೆ ವ್ಯವಸ್ಥಿತವಾಗಿ ಹಿಂಸಾತ್ಮಕ ಧಾಳಿಯನ್ನು ಮಾಡಲಾಯಿತು. ಬಿ.ಜೆ.ಪಿ. ತನ್ನ ಲಾಠಿಯ ಮೂಲಕ ತನ್ನ ವಿಚಾರಧಾರೆಯನ್ನು ಜನರ ಗಂಟಲಿನಲ್ಲಿ ತುರುಕುವ ಪ್ರಯತ್ನ ನಡೆಸುತ್ತಿದೆ.

ಬಿ.ಜೆ.ಪಿ. ಆಡಳಿತ ನಡೆಸುತ್ತಿದ್ದ ರಾಜ್ಯಗಳಲ್ಲಿ ಆರ್.ಎಸ್.ಎಸ್.ನ ಹಿಂದೂ ರಾಷ್ಟ್ರ ಪರಿಕಲ್ಪನೆ ಜಾರಿಗೆ ಬಂದ ರೀತಿಯನ್ನು ನಾವು ಈಗಾಗಲೇ ಗಮನಿಸಿದ್ದೇವೆ. ರಾಜ್ಯಗಳ ವಿದ್ಯಾಮಂತ್ರಿಗಳ ಸಮಾವೇಶದಲ್ಲಿ ಈ ಶಿಫಾರಸ್ಸುಗಳು ಒಪ್ಪಿತವಾಗಿದ್ದರೆ, ಅದು ರಾಷ್ಟ್ರೀಯ ನೀತಿಯಾಗಿ ರೂಪಿತವಾಗುತ್ತಿತ್ತು. ಕ್ರಿಶ್ಚಿಯನ್ ಶಾಲಾ ಕಾಲೇಜುಗಳಲ್ಲಿ

ಅವರದೇ ಆದ ಗೀತೆಗಳನ್ನು, ಶಿಶುಪ್ರಾಸಗಳನ್ನು ಹಾಡುವಾಗ ಸರಸ್ವತಿ ವಂದನೆ, ಸಂಸ್ಕೃತವನ್ನು ಕಲಿಯುವುದು ಆಕ್ಷೇಪಾರ್ಹವೇಕಾಗಬೇಕು ಎಂದು ಕೆಲವರು ಕೇಳಬಹುದು. ಕ್ರಿಶ್ಚಿಯನ್ ಕಾಲೇಜುಗಳಲ್ಲಿ ಅವರ ಧರ್ಮದ, ಮುಸ್ಲಿಂ ಸ್ಕೂಲುಗಳಲ್ಲಿ ನಮಾಜನ್ನು ಕಡ್ಡಾಯ ಮಾಡಿರುವುದು. ಆರ್.ಎಸ್.ಎಸ್. ಸ್ಕೂಲುಗಳಲ್ಲಿ ಸರಸ್ವತಿ ವಂದನೆಯನ್ನು ಕಡ್ಡಾಯ ಮಾಡಿರುವುದು ನಿಜವೆಂದಾದರೆ ಇಲ್ಲಿ ಕಂಡುಬರುವ ಸಮಸ್ಯೆಯೇ ಬೇರೆ. ಸೆಕ್ಯುಲರ್ ಆದ ಪ್ರಜಾಪ್ರಭುತ್ವದಲ್ಲಿ ಬಹುಮುಖೀ ಸಂಸ್ಕೃತಿಯ ರಾಷ್ಟ್ರದಲ್ಲಿ ರಾಷ್ಟ್ರವು ಯಾವುದೆ ಒಂದು ಬಣ್ಣಕ್ಕೆ ಆದ್ಯತೆಯನ್ನು ನೀಡಲಾಗದು. ರಾಷ್ಟ್ರದ ಸ್ಕೂಲು ಕಾಲೇಜುಗಳಲ್ಲಿ ಒಂದು ನಿರ್ದಿಷ್ಟ ಧರ್ಮದ ನಂಬಿಕೆ ಸಂಪ್ರದಾಯದ ಕಡೆ ವಾಲಿದರೆ, ಅದನ್ನು ಸೆಕ್ಯುಲರ್ ರಾಷ್ಟ್ರವೆಂದು ಕರೆಯಲು ಸಾಧ್ಯವಿಲ್ಲ. ಸರಸ್ವತಿ ವಂದನೆಯನ್ನು ಹಾಗೂ ಸಂಸ್ಕೃತ ಕಲಿಕೆಯನ್ನು ಕಡ್ಡಾಯಗೊಳಿಸಿದರೆ ಬ್ರಾಹ್ಮಣ ಹಿಂದೂ ಶ್ರೇಣಿಯ ವ್ಯವಸ್ಥೆಯನ್ನು ಶೈಕ್ಷಣಿಕ ನೀತಿಯ ಮೇಲೆ ಹೇರಿದಂತಾಗುತ್ತದೆ. ಇದು ಭಿನ್ನ ಧರ್ಮಕ್ಕೆ ಸೇರಿದವರ, ನಂಬಿಕೆ ಇಲ್ಲದವರ ಪ್ರಜಾಪ್ರಭುತ್ವ ಹಾಗೂ ನಾಗರೀಕ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಹೀಗೆ ಮಾಡಿದರೆ ಸರ್ಕಾರ ನಡೆಸುವ ಸ್ಕೂಲುಗಳು ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಸ್ಕೂಲುಗಳು ಯಾವುದೇ ನಿರ್ದಿಷ್ಟ ಧರ್ಮದ ನಂಬಿಕೆ ಆಚರಣೆಗಳನ್ನು ಜಾರಿಗೆ ತರಬಾರದೆಂಬ ಸಂವಿಧಾನದತ್ತ 28ನೇ ವಿಧಿಯ ಉಲ್ಲಂಘನೆಯಾಗುತ್ತದೆ. ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ನೆರವು ಪಡೆಯುವ ವಿದ್ಯಾಸಂಸ್ಥೆಗಳು ಒಂದು ನಿರ್ದಿಷ್ಟ ಧಾರ್ಮಿಕ ವಿಧಿವಿಧಾನಗಳನ್ನು ಪಾಲಿಸಲು ಸಂವಿಧಾನವು ಸಮ್ಮತಿಯನ್ನು ನೀಡುವುದಿಲ್ಲ. ಜಾತ್ಯಾತೀತ ಶಿಕ್ಷಣವನ್ನು ನೀಡುವ ಕೇಂದ್ರ ವಿದ್ಯಾಲಯದಂತಹ,' ಮತ್ತು ಖಾಸಗೀ ಶಾಲಾಕಾಲೇಜುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರ ಒಂದು ನಿರ್ದಿಷ್ಟ ಧಾರ್ಮಿಕ ವಿಧಿ ವಿಧಾನಗಳನ್ನು ಶೈಕ್ಷಣಿಕ ಸಂಸ್ಥೆಯ ಮೇಲೆ ಹೇರಿದರೆ ಅಲ್ಲಿ ವಾಸಿಸುವ ಇತರ ಜನಾಂಗದ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತದೆ.

ಅಲ್ಪಸಂಖ್ಯಾತರಿಗೆ ತಮ್ಮ ವಿದ್ಯಾಸಂಸ್ಥೆಗಳನ್ನು ನಡೆಸಲು ಸಂವಿಧಾನ ನೀಡಿರುವ ವಿಶೇಷ ಸವಲತ್ತುಗಳನ್ನು, ಹಿಂದೂ ಧರ್ಮಕ್ಕೆ ಎಸಗಲಾದ ಪಕ್ಷಪಾತವೆಂದು ಆರ್.ಎಸ್.ಎಸ್. ಭಾವಿಸುತ್ತದೆ. ಧಾರ್ಮಿಕ ಬೋಧನೆಯನ್ನು ಎಲ್ಲಾ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಡ್ಡಾಯಗೊಳಿಸಲು ಸಂವಿಧಾನಾತ್ಮಕ ಬದಲಾವಣೆಯನ್ನು ಮಾನವ ಸಂಪನ್ಮೂಲ ಇಲಾಖೆಯ ಶಿಫಾರಸ್ಸು ಒಳಗೊಂಡಿದೆ. ಅಲ್ಪಸಂಖ್ಯಾತರು ತಮ್ಮ ಇಚ್ಛಾನುಸಾರ ಶೈಕ್ಷಣಿಕ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ನೀಡುವುದಾಗಿ ಹೇಳಲಾಗಿದೆ.

ಬಿ.ಜೆ.ಪಿ.ಯ ಶಿಫಾರಸ್ಸುಗಳು ಪಕ್ಷಪಾತ ಧೋರಣೆಯಿಂದ ಕೂಡಿದ್ದಲ್ಲದೆ, ಹೆಣ್ಣು ಮಕ್ಕಳಿಗೆ 'ಗೃಹಕೃತ್ಯದ' ಶಿಕ್ಷಣವನ್ನು ಪ್ರಾಥಮಿಕ ಹಂತದಿಂದಲೇ ಕಡ್ಡಾಯಗೊಳಿಸುವುದರ ಮೂಲಕ ಲಿಂಗಪಕ್ಷಪಾತವನ್ನು ಪ್ರಾಥಮಿಕ ಹಂತದಿಂದಲೇ ಮಾಡಲಾಗುತ್ತದೆ. 1986ರಲ್ಲಿ ಜಾರಿಗೆ ತರಲಾದ ಲಿಂಗ ಪಕ್ಷಪಾತ ರಹಿತ ಶೈಕ್ಷಣಿಕ ನೀತಿಗೆ ಇದು ತದ್ವಿರುದ್ಧವಾಗಿದೆ. ಬಿ.ಜೆ.ಪಿ.ಯು ಮಹಿಳೆಯರಿಗೆ ಸಂಬಂಧಪಟ್ಟ ಹಕ್ಕುಗಳನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಬಿ.ಜೆ.ಪಿ. ಆಳ್ವಿಕೆ ನಡೆಸುತ್ತಿರುವ ಎಲ್ಲಾ ರಾಜ್ಯ ಸರ್ಕಾರಗಳಲ್ಲಿ ಲೈಂಗಿಕ ಅತ್ಯಾಚಾರ, ಹಾಗೂ ಇತರ ಗಂಭೀರ ಸ್ವರೂಪದ ಹಿಂಸೆಯು ತೀವ್ರವಾಗಿ ಹೆಚ್ಚಾಗಿದೆ. ಮಧ್ಯಪ್ರದೇಶದಲ್ಲಿ ಕ್ರಿಶ್ಚಿಯನ್ ಸನ್ಯಾಸಿನಿಯರ ಮೇಲೆ ನಡೆದ ಅತ್ಯಾಚಾರವನ್ನು ಸಂಘ ಪರಿವಾರದವರು ಸಮರ್ಥಿಸಿ ಕೊಂಡರಲ್ಲದೆ, ಕ್ರಿಶ್ಚಿಯನ್‌ರ ಹಿಂದೂವಿರೋಧಿ ಚಟುವಟಿಕೆಗಳಿಗೆ ತಕ್ಕ ಶಿಕ್ಷೆಯನ್ನೂ ಪಡೆದಿದ್ದಾರೆಂದು ಆರೋಪಿಸಿದರು.

ಮಹಿಳೆಯರು ಸಂಘಟಿತರಾಗಿ ಈ ಹಿಂದೂ ರಾಷ್ಟ್ರ ಪರಿಕಲ್ಪನೆಯನ್ನು ಬಲವಾಗಿ ಪ್ರತಿಭಟಿಸುವುದು ಅತ್ಯಗತ್ಯವಾಗಿದೆ. ಪ್ರತಿಭಟನೆಯನ್ನು ವ್ಯಕ್ತಪಡಿಸದಿದ್ದರೆ ಸ್ತ್ರೀಯರು ನಾಲ್ಕು ಗೋಡೆಯ ಒಳಗೆ ನಿರ್ದೇಶಿತ ಪಾತ್ರವನ್ನು ಒಪ್ಪಿಕೊಂಡು ಬದುಕಬೇಕಾಗುತ್ತದೆ. ಸಾಂಪ್ರದಾಯಿಕ ಪಾತ್ರವನ್ನು ವಿರೋಧಿಸುವ ಪ್ರಯತ್ನವನ್ನು ಮಾಡಿದರೆ 'ಅತ್ಯಾಚಾರದಂತಹ' ಹಿಂಸೆಗೆ ಒಳಗಾಗಬೇಕಾಗುತ್ತದೆ.

ಶೈಕ್ಷಣಿಕ ಶಿಫಾರಸ್ಸುಗಳನ್ನು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಇಡಲಾಗಿದೆ. ಕೇಂದ್ರದಲ್ಲಿ ಬಿ.ಜೆ.ಪಿ.ಯು ಆಡಳಿತಕ್ಕೆ ಬಂದ ತಕ್ಷಣ ಶೈಕ್ಷಣಿಕ ಸಂಸ್ಥೆಗಳ ಮೂಲಕ ತನ್ನ ನೀತಿಯನ್ನು ಬೇರೂರಿಸಲು ಪ್ರಯತ್ನಿಸುತ್ತಿದೆ. ಜಾತ್ಯಾತೀತ ಮನೋಭಾವನೆಯ ಶಿಕ್ಷಣ ತಜ್ಞರನ್ನು ಐ.ಸಿ.ಎಚ್.ಆರ್., ಐ.ಸಿ.ಎಸ್.ಎಸ್.ಆರ್., ಐಸಿಪಿಆರ್. ಐ.ಐ.ಎ.ಎಸ್. ಮುಂತಾದ ಸಂಸ್ಥೆಗಳಿಂದ ಒಬ್ಬರಾದ ಮೇಲೆ ಒಬ್ಬರಂತೆ ಹೊರಹಾಕಲಾಗುತ್ತಿದೆ. ಅವರ ಜಾಗದಲ್ಲಿ ಬಿ.ಜೆ.ಪಿ., ಆರ್.ಎಸ್.ಎಸ್. ಒಲವಿರುವಂತಹ ತಜ್ಞರನ್ನು ತುಂಬಲಾಗುತ್ತಿದೆ. ಇಂತಹ ಸಂಸ್ಥೆಯ ಒಳಗಡೆ ಬಿ.ಜೆ.ಪಿ., ಆರ್.ಎಸ್.ಎಸ್.ನ ಪರವಾಗಿ ಕಂಡುಬರುವ ನಿಲುವುಗಳಿಂದ

ಇಂದು ಸ್ಪಷ್ಟವಾಗಿದೆ. ಇತ್ತೀಚೆಗೆ ಇತಿಹಾಸದ ಸಂಶೋಧನೆಗೆ ಸಂಬಂಧಪಟ್ಟ ಪ್ರಾಜೆಕ್ಟ್‌ಗೆ ಸಂಬಂಧ ಪಟ್ಟ ಬದಲಾವಣೆಯನ್ನು ಗಮನಿಸಬಹುದು. ಉದ್ದೇಶಿಸಿದ 6 ಗ್ರಂಥ ಸಂಗ್ರಹಗಳಲ್ಲಿ ಎರಡು ಗ್ರಂಥಗಳ ಸಂಪಾದನೆಯ ನಂತರ ಇಲಾಖೆಯಲ್ಲಿ ಬದಲಾವಣೆಯನ್ನು ಮಾಡಿ ಪ್ರಾಜೆಕ್ಟ್‌ನ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಬಾಬರಿ ಮಸೀದಿಯನ್ನು ಕೆಡವಿರುವ ಬಗ್ಗೆ ವಸ್ತುನಿಷ್ಠವಾದ ಅಂಶಗಳು ದಾಖಲಾಗಬಹುದೆಂಬ ಭಯದಿಂದ ಈ ಬದಲಾವಣೆಯನ್ನೂ ಮಾಡಲಾಗಿದೆ.

ಮಾಹಿತಿಯ ಮಿತಿ, ಚರ್ಚೆ ನಡೆಸಲಾಗದಂತಹ ಉಸಿರು ಕಟ್ಟಿಸುವ ವಾತಾವರಣ ಇತರ ಸಂಸ್ಕೃತಿಯ ಮೇಲೆ ಬ್ರಾಹ್ಮಣ ವ್ಯವಸ್ಥೆಯ ಪ್ರಾಬಲ್ಯವನ್ನು ಹೇರುವುದು ಇವೆಲ್ಲಾ ಬಿ.ಜೆ.ಪಿ.ಯ 'ಭಾರತೀಕರಣ'ದ ಅರ್ಥವಾಗಿದೆ. ಕೋಮುವಾದ ಹಾಗೂ ವಿಭಜನಾತ್ಮಕ ಧೋರಣೆಯಿಂದಾಗಿ ಸಮಾಜದಲ್ಲಿ ಫ್ಯಾಸಿಸಂನ ಬೀಜವನ್ನು ಬಿತ್ತುತ್ತದೆ.

ಇಂದು ಬಡ ಮಕ್ಕಳು ಸರ್ಕಾರಿ ಶಾಲೆಗೆ ಹೋಗುತ್ತಿದ್ದಾರೆ. ಕಟ್ಟಡ, ಕಪ್ಪು ಹಲಗೆ, ನೀರಿನ ಸೌಲಭ್ಯ ಮುಂತಾದ ಕುಂದು ಕೊರತೆಗಳು ಇಂತಹ ಸ್ಕೂಲುಗಳಲ್ಲಿ ಎದ್ದು ಕಾಣುತ್ತದೆ. ಅರ್ಧದಲ್ಲಿ ಸ್ಕೂಲು ಬಿಡುವ ಹೆಣ್ಣು ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆ. ಇದು ಇಂದು ಸರ್ಕಾರಿ ಸ್ಕೂಲುಗಳ ಸ್ಥಿತಿಗತಿಯಾಗಿದೆ.

ಇಂದು ನಮ್ಮ ದೇಶದ ಬಹುಸಾಮಾನ್ಯ ಜನ ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದಾರೆ. ಅವರ ಅಗತ್ಯಕ್ಕೆ ತಕ್ಕಂತೆ ಶೈಕ್ಷಣಿಕ ವ್ಯವಸ್ಥೆಯೂ ಬದಲಾಗಬೇಕಾಗುತ್ತದೆ. ಒಂದು ಸಮಗ್ರ ದೃಷ್ಟಿಕೋನದಿಂದ ಶಿಕ್ಷಣವನ್ನು ನೀಡುವುದು ಅತ್ಯಗತ್ಯವಾಗಿದೆ. ಶೈಕ್ಷಣಿಕ ರಂಗದಲ್ಲಿ ಲಿಂಗ ಅಸಮಾನತೆಯನ್ನು ಅಳಿಸಿ ಹಾಕಬೇಕಾಗಿದೆ. ಶೈಕ್ಷಣಿಕ ಅಗತ್ಯಕ್ಕೆ ತಕ್ಕಂತೆ ಶೈಕ್ಷಣಿಕ ಸಾಧನಗಳನ್ನು ಪೂರೈಸಬೇಕಾಗುತ್ತದೆ. ಮಕ್ಕಳನ್ನು ಶಾಲೆಗೆ ಸೇರಿಸುವುದಕ್ಕೆ ಅತ್ಯಗತ್ಯವಾದ ಪ್ರೋತ್ಸಾಹವನ್ನು ನೀಡಬೇಕಾಗುತ್ತದೆ. ಲಿಂಗಭೇದ ಜಾತಿ, ವರ್ಗ, ಕೋಮುವಾದದಿಂದ ಮುಕ್ತವಾದ ಶಿಕ್ಷಣವನ್ನು ನೀಡಬೇಕಾಗುತ್ತದೆ. ಶ್ರಮಕ್ಕೆ ಆದ್ಯತೆ ನೀಡುವ ಶಿಕ್ಷಣವನ್ನು ನೀಡಬೇಕಾಗಿದೆ. ಇದು ಪ್ರಾಥಮಿಕ ಹಂತದಿಂದಲೇ ಪ್ರಾರಂಭವಾಗಬೇಕು.

ಈ ಉದ್ದೇಶಗಳನ್ನು ಈಡೇರಿಸಬೇಕಾದರೆ ಸರ್ಕಾರ ದ್ವಿಗುಣ ಬಂಡವಾಳವನ್ನು ಈ ಕ್ಷೇತ್ರದಲ್ಲಿ ತೊಡಗಿಸಬೇಕಾಗುತ್ತದೆ. 1991ರಿಂದ ಪ್ರಾರಂಭವಾದ ಮುಕ್ತ ಆರ್ಥಿಕ ನೀತಿಯಿಂದಾಗಿ ಶೈಕ್ಷಣಿಕ ರಂಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಬಜೆಟ್‌ನಲ್ಲಿ ಆದ್ಯತೆ ನೀಡುವುದು ಸಂಪೂರ್ಣವಾಗಿ ಕಡಿಮೆಯಾಗಿದೆ. ಬಡಮಕ್ಕಳ ಅಭಿವೃದ್ಧಿಗಾಗಿ ಪ್ರಾಥಮಿಕ ಶಿಕ್ಷಣರಂಗವನ್ನು ಸುಧಾರಿಸುವ ಬದಲಾಗಿ, ಸರ್ಕಾರ 'ಹಿಂದುಕರಣ'ಕ್ಕೆ ಆದ್ಯತೆಯನ್ನೂ ನೀಡಲಾಗುತ್ತಿದೆ. ಮಧ್ಯಮ ವರ್ಗದ ಜನರು ಖಾಸಗೀ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾಭ್ಯಾಸವನ್ನು ಪಡೆಯುವ ಸೌಲಭ್ಯವನ್ನು ಪಡೆಯುವುದರಿಂದ, ಮುಕ್ತ ಆರ್ಥಿಕ ನೀತಿಯ ಫಲವನ್ನು ಅವರು ಪಡೆಯುವಂತಾಗಿದೆ. ಆದರೆ ಸರ್ಕಾರಿ ಸ್ಕೂಲುಗಳಲ್ಲಿ ಓದುವ ಮಕ್ಕಳು ನಿರುದ್ಯೋಗ ಸಮಸ್ಯೆಯನ್ನು ಹಾಗೂ ಕೋಮುವಾದದ ಹೊರೆಯನ್ನು ಅವರ ಮೇಲೆ ಹೇರುತ್ತಾರೆ. 'ಭಾರತೀಕರಣ, ಆಧ್ಯಾತ್ಮೀಕರಣ'ದ ಮೂಸೆಯ ನೆಪದಲ್ಲಿ ಹಿಂದುತ್ವದ ಪರಿಕಲ್ಪನೆಯನ್ನು ಎಳೆಯ ಮನಸ್ಸಿನ ಮೇಲೆ ಹೇರುವುದು ಅರಾಜಕತ್ವ ಹಾಗೂ ಗೊಂದಲವನ್ನು ಸೃಷ್ಟಿಸಿದಂತೆಯೇ ಸರಿ.

●

ಪಂಜಾಬ

ಮೊದಲು
ನನ್ನ ಹೃದಯದಲ್ಲಿ
ಗೋರಿಗಳೇ ತುಂಬಿಕೊಂಡಿದ್ದವು;
ಆಗ ನೂರಾರು ಬಾರಿ
ಅದನ್ನು ನಾನು
'ಜಾಲಿಯನ್‌ವಾಲಾ ಬಾಗ್' ಅನ್ನುತ್ತಿದ್ದೆ.
ಆದರೆ ಇಂದು
ಅದಕ್ಕೆ
ಪಂಜಾಬ ಎಂದು
ಹೆಸರಿಟ್ಟಿದ್ದೇನೆ.

ಮೂಲ : ಅಮರ್‌ದೀಪ್ ಗಿಲ್
ಅನುವಾದ : ಡಾ. ಶರೇಶಚಂದ್ರ ಚುಲುಕಿಮಠ

ಶಿವಸೇನೆಯವರನ್ನು ಕೆರಳಿಸಿದ ಫೈರ್

ದೀಪಾ ಮೆಹ್ತಾ ಅವರು ನಿರ್ದೇಶಿಸಿರುವ 'ಫೈರ್' ಎರಡನೇ ಬಾರಿ ಸುದ್ದಿ ಮಾಡುತ್ತಿದೆ. ಒಮ್ಮೆ ಪಿತೃ ಪ್ರಧಾನತೆಯ ಕುಟುಂಬ ವ್ಯವಸ್ಥೆಯಲ್ಲಿ ನಲುಗುವ ಹೆಣ್ಣಿನ ಮನಸ್ಸಿನ ಸೂಕ್ಷ್ಮ ಚಿತ್ರಣಕ್ಕಾಗಿ ಶ್ಲಾಘಿಸಲ್ಪಟ್ಟು ಸುದ್ದಿ ಮಾಡಿದರೆ ಈಗ ಶಿವಸೈನಿಕರ ದಾಳಿಗೊಳಗಾಗಿ ಮತ್ತೆ ಸುದ್ದಿಯಲ್ಲಿದೆ. ಮುಂಬೈ ಮತ್ತು ದಿಲ್ಲಿ ಚಿತ್ರಮಂದಿರಲ್ಲಿ ಫೈರ್ ಚಿತ್ರ ಪ್ರದರ್ಶನವಾಗುತ್ತಿದ್ದಾಗ ಶಿವಸೈನಿಕರು ದಾಳಿ ಮಾಡಿ ಬಲವಂತವಾಗಿ ಪ್ರದರ್ಶನ ನಿಲ್ಲಿಸಿದ್ದರು.

ಮುಂಬೈನ ನ್ಯೂ ಎಂಪೈರ್ ಚಿತ್ರ ಮಂದಿರದಲ್ಲಿ ಶಿವ ಸೈನಿಕರು ಮಾಡಿದ ದಾಳಿಗೆ ಸೂಕ್ತ ಕ್ರಮ ಕೈಗೊಳ್ಳದ ಮುಖ್ಯಮಂತ್ರಿ ಮನೋಹರ್ ಜೋಶಿಯವರು ಚಿತ್ರವನ್ನು ಹಿಂತೆಗೆದುಕೊಂಡು ಸಾರ್ವಜನಿಕವಾಗಿ, ಶಿವಸೈನಿಕರ ಹಿಂಸಾತ್ಮಕ ಚಟುವಟಿಕೆಯನ್ನು ಬೆಂಬಲಿಸಿದ್ದಾರೆ. ಚಿತ್ರವೂ ಮತ್ತೊಮ್ಮೆ ಮರು ಪರೀಕ್ಷೆ / ಪರೀಶೀಲನೆಗೆ ಒಳಪಟ್ಟಿತು. ಮರು ಪರಿಶೀಲನೆಯ ನಂತರವೂ ಚಿತ್ರವನ್ನು ನಿಷೇಧಿಸಿಲ್ಲ. ಆದರೂ ಶಿವಸೇನೆಯವರ ಗೂಂಡಾಗಿರಿ ಇನ್ನೂ ನಿಂತಿಲ್ಲ. ಸಿನಿಮಾದ ಪರವಾಗಿ ಸುಪ್ರೀಂ ಕೋರ್ಟಿನಲ್ಲಿ ಮನವಿ ಸಲ್ಲಿಸಿರುವ ದಿಲೀಪ್ ಕುಮಾರ್ ಅವರ ಮನೆಯ ಮುಂದೆ ಗಲಾಟೆ ಮಾಡಲಾಗಿದೆ. ದಿಲೀಪ್ ಕುಮಾರ್ ಅಲ್ಲದೆ commualism combate ಪತ್ರಿಕೆಯ ಸಂಪಾದಕಿಯೂ ಸಹ ಮನವಿ ಸಲ್ಲಿಸಿದ್ದರು. ಮುಂಬೈನಲ್ಲಿ ನೆಲೆಸಿರುವ ಈಕೆಯ ಮೇಲೂ ದಾಳಿ ನಡೆಯುವ ಆತಂಕವಿದೆ.

ನಿಜಕ್ಕು ಫೈರ್ ಚಿತ್ರ ಮಾಡಿರುವ ಅನಾಹುತವಾದರೂ ಏನು? ಸೆನ್ಸಾರ್ ಮಂಡಳಿಯವರ ಸಮ್ಮತಿ ಪಡೆದ ಮೇಲೆಯೇ ಸಿನಿಮಾ ಪ್ರದರ್ಶನ ಕಂಡದ್ದು. ಯಾವ ತೊಂದರೆಯೂ ಇಲ್ಲದೆ ತುಂಬಿದ ಗೃಹಗಳಿಂದ ಪ್ರದರ್ಶನವಾಗುತ್ತಿತ್ತು. ಹಿಂದುತ್ವವಾದಿಗಳಿಗೆ, ಶಿವಸೇನೆಯವರಿಗೆ ಫೈರ್ ಸಿನಿಮಾ ಯಾಕೆ ಆತಂಕವನ್ನುಂಟುಮಾಡುತ್ತಿದೆ. ಇವರಿಗೆ ಸಾರ್ವಜನಿಕರ ನೈತಿಕತೆಯ ಕಾವಲುಗಾರಿಕೆಯನ್ನು ಕೊಟ್ಟವರಾರು? ಈ ಪ್ರಶ್ನೆಗೆ ಉತ್ತರಿಸಲು ಸಿನಿಮಾದ ಕತೆಯನ್ನು ಸಂಕ್ಷಿಪ್ತವಾಗಿ ಹೇಳಬೇಕಾಗುತ್ತದೆ.

ಸಿನಿಮಾದ ಕತೆ ದೆಹಲಿಯ ಮಧ್ಯಮ ವರ್ಗದ ವ್ಯಾಪಾರಸ್ಥ ಕುಟುಂಬವನ್ನು ಕುರಿತದ್ದು. ಈ ಕುಟುಂಬಕ್ಕೆ ಮದುವೆಯಾಗಿ ಬಂದ ಹೆಂಗಸರಿಬ್ಬರ ಮೇಲೆ ಕತೆ ಕೇಂದ್ರಿತವಾಗಿದೆ. ಹಿರಿಯಳಾದ ರಾಧಾಳ ಗಂಡ ಸ್ಥಳೀಯ ಸ್ವಾಮಿಜಿಯೊಬ್ಬನ ಮಾರ್ಗದರ್ಶನದಂತೆ ಬ್ರಹ್ಮಚರ್ಯ ಪಾಲಿಸುತ್ತಿರುತ್ತಾನೆ. ಆಸೆಗಳೇ ದುಃಖಕ್ಕೆ ಕಾರಣ ಎಂಬ ಸ್ವಾಮಿಯ ಬೋಧನೆಯಂತೆ ಐಹಿಕ ಚಂಚಲತೆಯಿಂದ ದೂರವಿರಲು ಪ್ರಯತ್ನಿಸುತ್ತಿರುತ್ತಾನೆ. ಗಂಡನ ಬ್ರಹ್ಮಚರ್ಯ ವ್ರತಕ್ಕೆ ಹೆಂಡತಿಯೂ ಸಹಕರಿಸಬೇಕೆಂದು ಹೇಳುವ ಮೂಲಕ ರಾಧಾಳ ಮೇಲೂ ಬ್ರಹ್ಮಚರ್ಯ ಪಾಲನೆಯನ್ನು ಹೇರುತ್ತಾನೆ.

ಕಿರಿಯಳಾದ ನೀತಾಳ ಗಂಡ ಇನ್ನೊಬ್ಬ ಹೆಂಗಸನ್ನು ಪ್ರೀತಿಸುತ್ತಿರುತ್ತಾನೆ. ಹೆಂಡತಿಯ ಬಗ್ಗೆ ಅವನಿಗೆ ಆಸಕ್ತಿ ಇಲ್ಲ. ಈ ಇಬ್ಬರೂ ಹೆಂಗಸರು ಹೆಂಡತಿಯರ ಕರ್ತವ್ಯಕ್ಕೆ ತಮ್ಮನ್ನು ಒಗ್ಗಿಸಿಕೊಂಡು ಹೋಗುತ್ತಿರುತ್ತಾರೆ. ಮನೆಯಲ್ಲಿ ವಯಸ್ಸಾದ ಹಿರಿಯ ಹೆಂಗಸನ್ನು ನೋಡಿಕೊಳ್ಳುವುದು, ಮಾರಾಟ ಮಾಡಲು ಅಡುಗೆ ತಯಾರಿಸುವುದರ ಜೊತೆಗೆ ಮನೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಈ ಹೆಂಗಸರದೆ. ಈ ಕುಟುಂಬದ ಕೆಲಸದಲ್ಲಿ ಭಾಗವಾಗಿಯೂ ಆ ಕುಟುಂಬದ ಭಾಗವಾಗಿರದ ಮತ್ತೊಬ್ಬ ವ್ಯಕ್ತಿ ಎಂದರೆ ಕೆಲಸ ಮಾಡುವ ಆಳು ಮುಂಡು. ಕುಟುಂಬದ ಜವಾಬ್ದಾರಿಯೊಂದಿಗೆ ಏಗುವುದಲ್ಲದೆ, ತಮ್ಮೊಳಗಿನ ಖಾಲಿತನದೊಂದಿಗೂ ಏಗುವ ಸ್ಥಿತಿ ಆ ಹೆಂಗಸರದು. ಯಾವುದೇ ಭಾವನಾತ್ಮಕ ಬೆಂಬಲವಿಲ್ಲದೆ, ಬೆಚ್ಚನೆಯ ಪ್ರೀತಿಯಿಲ್ಲದೆ, ದೈಹಿಕ ಆಸೆಗಳನ್ನು ಅದುಮಿಟ್ಟು ಬದುಕಬೇಕಾಗಿರುತ್ತದೆ. ಆ ಇಬ್ಬರು ಹೆಂಗಸರ ನಡುವೆ ಆತ್ಮೀಯತೆ ಬೆಳೆದು ಅದು ಪ್ರೀತಿಗೆ ತಿರುಗತ್ತದೆ. ಆ ಪ್ರೀತಿಯ ಬೆಂಬಲದಿಂದ ಅವರಿಬ್ಬರು ಪಿತೃಪ್ರಧಾನ ಕೌಟುಂಬಿಕ ರಚನೆಯನ್ನು ತ್ಯಜಿಸಿ ಬಂಧನದ ಬದುಕಿಂದ ಹೊರ ನಡೆಯುತ್ತಾರೆ.

ಇಡಿ ಚಿತ್ರ ಪಿತೃ ಪ್ರಾಧಾನ್ಯ ಕುಟುಂಬದ ನಿರಂಕುಶತೆಗೆ ಪ್ರತಿಭಟನೆಯಂತಿದೆ. ಮಹಿಳೆಯರ ನಿಸ್ವಾರ್ಥ ಸೇವೆಯನ್ನು ನಿರೀಕ್ಷಿಸುವುದರ ಜೊತೆಗೆ ಅವಳ ಸ್ವಂತಿಕೆ, ಆಕಾಂಕ್ಷೆ ಲೈಂಗಿಕತೆಯನ್ನೆ ಹೊಸಕಿ ಹಾಕುತ್ತದೆ, ಪಿತೃ ಪ್ರಾಧಾನ್ಯ ಕುಟುಂಬ ವ್ಯವಸ್ಥೆ. ಅದರಿಂದ ಬಿಡಿಸಿಕೊಳ್ಳಲು ಸಿನಿಮಾದಲ್ಲಿ ಆ ಹೆಂಗಸರು ತೆಗೆದುಕೊಳ್ಳುವ ನಿರ್ಧಾರ ಮಾಮೂಲಿ ಸಿನಿಮಾಗಳಿಗಿಂತ ಭಿನ್ನ. ಆ ಕಾರಣದಿಂದಲ್ಲೂ ಸಿನಿಮಾ ಭಿನ್ನವಾಗಿದೆ.

ಸಿನಿಮಾ ನೋಡಿದ ಮಹಿಳೆಯೊಬ್ಬರು "ಫೈರ್ ಸಿನಿಮಾ ಮಾಮೂಲಿ ಚಿತ್ರವಾಗಿದ್ದರೆ ಆ ಹೆಂಗಸರಿಬ್ಬರೂ ಇನ್ನೊಬ್ಬ ಗಂಡಸನ್ನು ಪ್ರೇಮಿಸಿ ಮದುವೆಯಾಗುತ್ತಿದ್ದರು. ಅಥವಾ ಇದು ತಮ್ಮ ಹಣೆಬರಹವೆಂದು ಒಗ್ಗಿಕೊಂಡು ಹೋಗಿರುತ್ತಿದ್ದರು. ಇಲ್ಲ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಈ ಸಿನಿಮಾ ಆ ರೀತಿ ಇಲ್ಲ. ಆದರೆ ಈ ಹೆಂಗಸರು ಒಬ್ಬರಿಗೊಬ್ಬರು ಆಸರೆಯಾಗುವುದರೊಂದಿಗೆ ಫೈರ್ ಸಿನಿಮಾ ಮುಗಿಯುತ್ತದೆ.

ಸಿನಿಮಾದಲ್ಲಿ, ತಮ್ಮೊಳಗಿನ ಜಿಗುಪ್ಸೆಗೆ ಉತ್ತರವಾಗಿ ಹೆಂಗಸರಿಬ್ಬರು ಆತ್ಮೀಯರಾಗುತ್ತಾರೆ, ಬಯಕೆ ಇಂದ ಅಲ್ಲ ಎಂದು ವಾದಿಸಬಹುದು. ಶಿವಸೈನಿಕರನ್ನು ನಿಜಕ್ಕೂ ಸಿಟ್ಟಿಗೆಬ್ಬಿಸಿರುವುದು ಹೆಂಗಸರಿಬ್ಬರ ನಡುವಿನ ಆತ್ಮೀಯತೆ ಮತ್ತು ಅವರಿಬ್ಬರು ಸಂಪೂರ್ಣವಾಗಿ ಪಿತೃಪ್ರಧಾನ ಕುಟುಂಬ ರಚನೆಯನ್ನು ತ್ಯಜಿಸುವುದು. ಈ ನಿರಾಕರಣೆ ಅವರಲ್ಲಿ ಆಘಾತ ಉಂಟು ಮಾಡಿದೆ.

ಹಿಂದುತ್ವ ಶಕ್ತಿಗಳಿಗೆ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯೇ ನಾಗರೀಕ ಸಮಾಜಕ್ಕೆ ಬುನಾದಿ. ಈ ಶಕ್ತಿಗಳು ಮಹಿಳೆಯರು ತಮ್ಮ ಆತ್ಮಗೌರವ ಮತ್ತು ಸ್ವಾತಂತ್ರಕ್ಕೆ ನಡೆಸುವ ಪ್ರಯತ್ನವನ್ನು ಹತ್ತಿಕ್ಕಲು ಎಲ್ಲಾ ಅವಕಾಶವನ್ನು ಬಳಸಿಕೊಂಡಿವೆ. ಸತಿಯಂತಹ ಹೀನ ಆಚರಣೆಯನ್ನು ವೈಭವೀಕರಿಸುವ, ಅತ್ಯಾಚಾರಿಗಳನ್ನು ಸಾರ್ವಜನಿಕವಾಗಿ ಸನ್ಮಾನಿಸುವ, ಮಹಿಳೆಯರಿಗೆ ಆಸ್ತಿ ಹಕ್ಕು ನಿರಾಕರಿಸುವ, ಹೆಂಡತಿಯರನ್ನು ಥಳಿಸುವುದನ್ನು ಸಮರ್ಥಿಸಿಕೊಳ್ಳುವ, ಮಹಿಳೆಯರಿಗೆ (ವಿಚ್ಛೇದಿತ ಮಹಿಳೆಯರಿಗೆ) ಮಕ್ಕಳ ಪಾಲನೆಯ ಹಕ್ಕನ್ನು ನಿರಾಕರಿಸುವ ಹಿಂದುತ್ವ ಶಕ್ತಿಗಳು ಹೆಣ್ಣು ಮಕ್ಕಳಿಗೆ ಮನೆ ನೋಡಿಕೊಳ್ಳುವುದನ್ನು ಶಾಲೆಯಲ್ಲಿ ಕಡ್ಡಾಯ ಮಾಡಲು ಹೊರಟಿವೆ. ಈ ಶಕ್ತಿಗಳು ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹತ್ತಿಕ್ಕಿ ಅವರನ್ನು ಮನೆಯೊಳಗೆ ಬಂಧಿಸುವ ಯಾವ ಮಾರ್ಗವನ್ನು ಅವರು ಬಿಟ್ಟಿಲ್ಲ. ಈ ಶಕ್ತಿಗಳಿಗೆ ಪೈರ್ ಸಿನಿಮಾ ಸಿಟ್ಟಿಗೆಬ್ಬಿಸಿರುವುದಲ್ಲಿ ಆಶ್ಚರ್ಯವೇನೂ ಇಲ್ಲ. ಯಾಕೆಂದರೆ ಸಿನಿಮಾ ಪಿತೃಪ್ರಧಾನತೆಯನ್ನು ಪ್ರತಿಭಟಿಸುತ್ತದೆ.

ತಮ್ಮ ಗೂಂಡಾಗಿರಿಯನ್ನು ಸಮರ್ಥಿಸಿಕೊಳ್ಳಲು, ಸಿನಿಮಾ ನಮ್ಮ ಸಂಪ್ರದಾಯವನ್ನು ತಿರಸ್ಕರಿಸುತ್ತದೆ ಎಂಬ ಹೇಳಿಕೆಯನ್ನು ಶಿವಸೈನಿಕರು ನೀಡಿದ್ದಾರೆ. ಅವರ ಅಭಿಪ್ರಾಯದಲ್ಲಿ ಸತಿ, ಅತ್ಯಾಚಾರ, ಹೆಂಡತಿಯರನ್ನು ಥಳಿಸುವುದು, ಮಹಿಳೆಯರನ್ನು ತುಳಿಯುವ ಇತರ ವಿಧಾನಗಳೇ ಭಾರತೀಯ ಸಂಪ್ರದಾಯವನ್ನು ರೂಪಿಸುವುದು. ಶಿವಸೈನಿಕರ ಗೂಂಡಾಗಿರಿಯನ್ನು, ಮಹಾರಾಷ್ಟ್ರ ಸರ್ಕಾರದ ನಿಲುವನ್ನು ವಿರೋಧಿಸಿ ದೇಶದೆಲ್ಲೆಡೆ ಪ್ರತಿಭಟನೆಗಳು ನಡೆದಿವೆ. ಸಿನಿಮಾ ಉದ್ಯಮದ ಕೆಲವು ವ್ಯಕ್ತಿಗಳು ಮತ್ತು ವಕೀಲರುಗಳು ದಿಲೀಪ್‌ಕುಮಾರ್ ಅವರ ನೇತೃತ್ವದಲ್ಲಿ ಡಿಸೆಂಬರ್ 7ರಂದು ಫೈರ್ ಸಿನಿಮಾ ಪ್ರದರ್ಶನಕ್ಕೆ ರಕ್ಷಣೆ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟಿನಲ್ಲಿ ಮನವಿ ಮಾಡಿಕೊಂಡಿದ್ದಾರೆ. ಪಿಟಿಶನ್‌ನಲ್ಲಿ ಶಿವಸೇನಾ ಮುಖ್ಯಸ್ಥ ಬಾಳ್‌ಠಾಕ್ರೆ ಅವರು ಆಗಾಗ್ಗೆ ಪಾಕಿಸ್ತಾನ ಟೀಮು ಮಹಾರಾಷ್ಟ್ರದಲ್ಲಿ ಕ್ರಿಕೆಟ್ ಆಡಬಾರದೆಂದು, ಕೆಲವು ಪುಸ್ತಕಗಳು ಬಿಡುಗಡೆಯಾಗಬಾರದೆಂದು ಮತ್ತು ಈಗ ಸೆನ್ಸಾರಿನಿಂದ ಹೊರಬಂದಿರುವ ಚಿತ್ರವನ್ನು ಪ್ರದರ್ಶಿಸಬಾರದೆಂದು ಗಲಾಟೆ ಎಬ್ಬಿಸಿ ಶಾಂತಿಯನ್ನು ಕದಡುತ್ತಿರುವುದನ್ನು ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ ತುರ್ತು ಪರಿಸ್ಥಿತಿಯನ್ನು ವಿರೋಧಿಸಲಾಗಿದೆ. ಅಲ್ಲದೆ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮೂಲಕ ಸಂವಿಧಾನದ ಆರ್ಟಿಕಲ್ 19(1)(A)ಯನ್ನು ಉಲ್ಲಂಘಿಸಲಾಗಿದೆ. ಹಿಂಸಾತ್ಮಕ ಚಟುವಟಿಕೆಯಿಂದ ಪ್ರದರ್ಶನ ನಿಲ್ಲಿಸಿದವರಲ್ಲವೆ, ಕ್ರಮಕೈಗೊಳ್ಳದ ಪೋಲೀಸ್ ವ್ಯವಸ್ಥೆಯು ಸಹ ಸಂವಿಧಾನವನ್ನು ಉಲ್ಲಂಘಿಸಿದೆ ಎಂದು ಹೇಳಲಾಗಿದೆ.

ದೆಹಲಿಯಲ್ಲಿ ಜಾಗೋರಿ, ಸಹೇಲಿ, ಕಾಲಿ, ಅಂಕುರ್ ಮತ್ತು ಸಹಮತ್ ಸಂಘಟನೆಗಳಲ್ಲದೆ ಇನ್ನು ಅನೇಕ ಸಂಘಟನೆಗಳು ಡಿಸೆಂಬರ್ 7 ರಂದು ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಿದ್ದರು.

ಹಿಂದುತ್ವ ಶಕ್ತಿಗಳು ಸಂಗೀತ, ಸಾಹಿತ್ಯ, ಸಿನಿಮಾ ಅಲ್ಲದೆ ಧರ್ಮ, ಶಿಕ್ಷಣ ಕ್ಷೇತ್ರಕ್ಕೂ ದಾಳಿ ಮಾಡುತ್ತಿವೆ. ತಮ್ಮ ಸಂಕುಚಿತ ಮಾನದಂಡದಿಂದ ಇದು ಸರಿ, ಇದು ತಪ್ಪೆಂದು ತೀರ್ಮಾನಿಸಿ ಆ ಮೂಲಕ ಎಲ್ಲ ಅಳೆದು ನೋಡುವ ಉದ್ಧಟತನ ತೋರುತ್ತವೆ. ಎಚ್ಚೆತ್ತ ಜನರು ಪ್ರತಿಭಟಿಸದಿದ್ದಲ್ಲಿ ಫ್ಯಾಸಿಸ್ಟ್ ಶಕ್ತಿಗಳೇ ಮೇಲಾಗಿ ದೇಶದಲ್ಲಿ ಸಾಂಸ್ಕೃತಿಕ ತುರ್ತುಪರಿಸ್ಥಿತಿ ಉಂಟಾಗುವ ದಿನಗಳು ದೂರವಿಲ್ಲ.

- ನೀಲಾಂಜನ

ಭಯ

ಇತ್ತೀಚೆಗೆ
ನನ್ನ ಪಟ್ಟಣದಲ್ಲಿ
ಯಾರ ಬಾಗಿಲಲ್ಲಿಯೂ
ತೂಗಾಡುತ್ತಿರುವ
ನೇಮ್ - ಪ್ಲೇಟ್‌ನ್ನು
ನಾನು
ನೋಡಿಯೇ ಇಲ್ಲ

ಮೂಲ : ಅವತಾರ್ ಜೀತ್
ಅನುವಾದ : ಇಟಗಿ ಈರಣ್ಣ

ಬಿಡುಗಡೆಯ ಹಾದಿಯತ್ತ - ಸ್ತ್ರೀ ಸಂಘಟನೆ

ಬಹಿರಂಗಗೊಳ್ಳದ ಕ್ರೌರ್ಯ ಸ್ತ್ರೀ-ಪುರುಷರ ನಡುವಿರಲು ಸಾಧ್ಯವಿದೆ. ದುಡಿಯುತ್ತಿರುವ ನಾಲ್ಕಂಕಿಯ ಸಂಬಳ ತರುವ ಮಹಿಳೆಯರಿಂದ ಹಿಡಿದು ದುಡಿಯದ ಅನಕ್ಷರಸ್ಥ ಮಹಿಳೆಯವರೆಗೂ ಒಂದು ರೀತಿಯ ಪೂರ್ವನಿರ್ಧಾರಿತವಾದ ಗಂಡ-ಹೆಂಡತಿಯ ನಡುವೆ ಮೇಲು ಕೀಳಿನ ಸಂಬಂಧ ಸಿದ್ಧವಾಗಿರುತ್ತದೆ. ಆರ್ಥಿಕ ಸ್ವಾವಲಂಬನೆಯಿದ್ದರೂ ಮಾನಸಿಕ ದಾಸ್ಯ ಕಳೆದುಕೊಳ್ಳುವುದು ಅಷ್ಟೊಂದು ಸುಲಭವಲ್ಲ ದೈಹಿಕ ಕ್ರೌರ್ಯವನ್ನು ಎದುರಿಸದಿದ್ದರೂ ಗಂಡನ ಹಾಗೂ ಕುಟುಂಬದ ಉಪೇಕ್ಷೆಗೆ, ನಿರಂತರ ನಿರ್ಲಕ್ಷ್ಯಕ್ಕೆ ಒಳಗಾಗುವ ಹೆಣ್ಣುಗಳು ವೈಯಕ್ತಿಕವಾಗಿ ತಮ್ಮತನವನ್ನು ಸ್ಥಾಪಿಸಿಕೊಳ್ಳಲು ಅಸಮರ್ಥರಾದಾಗ ಹತಾಶರಾಗುತ್ತಾರೆ. ದುಡಿಮೆಯ ಕ್ಷೇತ್ರದಲ್ಲಿರುವ ಕೆಲವು ಹೆಣ್ಣುಗಳು ತಾವು ಯುವ ಕಾರ್ಮಿಕ ಸಂಘಟನೆಗೆ ಸೇರಬೇಕೆಂಬುದಕ್ಕೆ ಗಂಡನ ಅನುಮತಿಗಾಗಿ ಕಾಯುವವರು ಇದ್ದಾರೆ. ಇಲ್ಲಿ ಕೇವಲ ಗಂಡಸು ಮಾತ್ರ ಶೋಷಣೆಗೆ ಕಾರಣವಲ್ಲ ತಮಗಾಗುತ್ತಿರುವ ಸ್ವಾತಂತ್ರ್ಯ ಹರಣದ ಪರಿವೆಯೇ ಇಲ್ಲದ ಹೆಂಗಸರ ದುಃಸ್ಥಿತಿ ನಿಜಕ್ಕೂ ವಿಷಾದನೀಯ. ತಮ್ಮ ಸುತ್ತ ಮುತ್ತಣ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಪರಿವೆಯಿಲ್ಲದೆ ತಮ್ಮಷ್ಟಕ್ಕೆ ತಮ್ಮದೇ ಪ್ರಪಂಚ ಸೃಷ್ಟಿಸಿಕೊಂಡು ನಡೆಯುವ ನಮ್ಮ ಸ್ತ್ರೀ ಪರಂಪರೆಯು ಅಭದ್ರತೆಯಿಂದ ಕೂಡಿದ್ದಾಗಿದೆ. ಈ ಹೆಣ್ಣುಗಳ ಮಾನಸಿಕ ಅಭದ್ರತೆ ಎಷ್ಟೊಂದು ಕ್ರೂರವಾಗಿದ್ದೆಂದರೆ ಅಭದ್ರತೆಯ ನಿರೀಕ್ಷೆಯಲ್ಲಿ ಹತಾಶರಾಗಿ ಸಮಸ್ಯಾತ್ಮಕವಾದ ವಿವೇಚನಾ ರಹಿತವಾದ ಪರ್ಯಾಯ ಸಾಧ್ಯತೆಗಳಿಗೆ ಅವರು ಜೋತು ಬೀಳುತ್ತಾರೆ.

ಮಹಿಳಾ ಸ್ವಾತಂತ್ರ್ಯವೆನ್ನುವುದು ಅಮೂರ್ತವೂ ಅಲ್ಲ. ಸನ್ನಿವೇಶಗಳಿಂದ ಅಭಾದಿತವೂ ಅಲ್ಲ. ಹಾಗೆಯೇ ಸ್ವಾತಂತ್ರ್ಯದ ನಿಯಂತ್ರಣ ವೈಯಕ್ತಿಕವಾದದ್ದಾಗಲೀ ಸನ್ನಿವೇಶದ ನಿಯಂತ್ರಣವಾಗಲೀ ಆಗಬಹುದು. ಆದ್ದರಿಂದ ಹೆಣ್ಣು ತನ್ನ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಅದರ ಬಗೆಗಿನ ತಿಳುವಳಿಕೆ, ಅದನ್ನು ಪಡೆಯಲು ಪ್ರಯತ್ನ ನಡೆಸಬೇಕು. ಅನುಭವಜನ್ಯವಾದ ತಿಳುವಳಿಕೆಯನ್ನು ಹೆಣ್ಣು ದೂರಮಾಡಿದಷ್ಟು ಅವಳು ದಾಸ್ಯದ ಸಂಕೋಲೆಯನ್ನು ತನಗೇ ಸುತ್ತಿಕೊಳ್ಳುತ್ತಾಳೆ. ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕಾದರೆ ವಿವಾಹ ಒಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು. ಸ್ವಾತಂತ್ರ್ಯವು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿದೆ. ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದೆ ಹಾಗೂ ಸ್ವಯಂಗಳಿಕೆಯಲ್ಲಿ ತೊಡಗದಿದ್ದರೆ ಅವಳು ಗಂಡ ಅಥವಾ ಇನ್ಯಾರ ಮೇಲೋ ಅವಲಂಬಿತಳಾಗಿರಬೇಕಾಗುತ್ತದೆ. ಪರಾವಲಂಬಿಗಳೆಂದಿಗೂ ಸ್ವತಂತ್ರರಲ್ಲ! ಸ್ತ್ರೀ-ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲದಂತಹ ಸ್ವತಂತ್ರ ಹಾಗೂ ಸಂಗಾತಿಯಾಗಿರುವಂಥದ್ದು.

ಹೆಣ್ಣಿನ ಸಮಸ್ಯೆಗಳ ಉಗಮ ಮತ್ತು ಸ್ವರೂಪವನ್ನು ಅಧ್ಯಯನ ಮಾಡುವುದರಿಂದ ಆ ಸಮಸ್ಯೆಗಳು ಅಪೇಕ್ಷಿಸುವ ಪರಿಹಾರಗಳತ್ತ ದೃಷ್ಟಿ ಹರಿಸಬಹುದು. ಹೆಣ್ಣಿನ ಶತ್ರು ಪುರುಷನಲ್ಲ, ಗಂಡು ಹೆಣ್ಣಿನ ಅಸಮಾನತೆಗೆ, ಸ್ತ್ರೀ ಶೋಷಣೆಯ ವಿಮೋಚನೆಗೆ ಸ್ತ್ರೀ ಪುರುಷರ ಇಂದಿನ ಪಾತ್ರಗಳು ಅದಲು ಬದಲು ಆಗಬೇಕಾಗಿಲ್ಲ. ಹಾಗಾದರೆ ಆಗಬೇಕಾಗಿರುವುದು ಮತ್ತೇನು?

ಸಮಾಜದ ಅರ್ಧ ಭಾಗವಾದ ಹೆಣ್ಣಿನ ಇಂದಿನ ದುಃಸ್ಥಿತಿಗೆ ಒಂದು ಚರಿತ್ರೆಯಿದೆ. ಚರಿತ್ರೆಯಲ್ಲಿ ಅವಳ ಸ್ಥಾನಮಾನಗಳಿಗೆ ಕಾರಣವಾದ ಆಧುನಿಕ ಸಾಮಾಜಿಕ ಶಕ್ತಿಗಳು ಮತ್ತು ಅವುಗಳ ಬದಲಾವಣೆಯಿಂದುಂಟಾದ ಪರಿಣಾಮದ ಅಧ್ಯಯನ ಅವಶ್ಯವಾಗಿದೆ.

ಇಂದು ಸ್ತ್ರೀ ಪುರುಷರ ನಡುವಿನ ಅಸಮಾನತೆಯ ವಿರುದ್ಧ ಹೋರಾಟ ಹಲವು ರೀತಿಯಲ್ಲಿ ನಡೆದಿದೆ. ವರದಕ್ಷಿಣೆ, ಅತ್ಯಾಚಾರ, ಅಶ್ಲೀಲ ಭಿತ್ತಿಚಿತ್ರಗಳು ಮತ್ತು ಜಾಹಿರಾತಿನ ವಿರುದ್ಧ ಮಹಿಳಾ ಸಂಘಟನೆಗಳು ತಮ್ಮ ಪ್ರತಿಭಟನೆಯನ್ನು ಸೂಚಿಸಿ ಹೆಣ್ಣಿನ ಮೇಲೆ ನಡೆಸಿರುವ ಮಾನಸಿಕ ಹಾಗೂ ದೈಹಿಕ ಶೋಷಣೆಗಳ ವಿರುದ್ಧ ದನಿಯೆತ್ತಿವೆ. ಬೇರೆಯವರ ವೈಯಕ್ತಿಕ ನೋವುಗಳನ್ನು ತನ್ನದಾಗಿಸಿಕೊಂಡು ಹೋರಾಡುವ ಈ ಸಾಮಾಜಿಕ ಹೋರಾಟವು ಹೊಸ ಮೌಲ್ಯಗಳ ಜೀವ ತುಂಬುವ ಕಾರ್ಯದತ್ತ ಹೆಜ್ಜೆ ಹಾಕಿದೆ. ಇದರ ಜೊತೆಗೇ ದುಡಿಮೆಯ ಕ್ಷೇತ್ರದಲ್ಲಿರುವ ಅವ್ಯವಸ್ಥೆಯ ವಿರುದ್ಧ ವೇತನ ತಾರತಮ್ಯದ ವಿರುದ್ಧ ದನಿಯೆತ್ತುವ ಸಂಘಟಿತ ಮಹಿಳೆಗೆ ಹೊಸ ಸಮಾಜವೊಂದರ ಸೃಷ್ಟಿಯಲ್ಲಿ ಹಿರಿದಾದ ಜವಾಬ್ದಾರಿಯಿದೆ. ಅಸಂಘಟಿತವಾಗಿರುವ ಮಹಿಳೆಯರನ್ನು ಸಂಘಟಿಸುವ ಪ್ರಯತ್ನದಲ್ಲಿ ಅವಳು ಹೆಜ್ಜೆ ಹಾಕಬೇಕಾಗಿದೆ.

ದುಡಿಯುವ ಮಹಿಳೆ ತನ್ನ ಹೋರಾಟದಿಂದ ಮಾತ್ರವೇ ತನ್ನ ವಿಮೋಚನೆಯನ್ನು ಪಡೆಯಬಲ್ಲಳು ಮತ್ತು ಸಮಾಜದ ವಿಮೋಚನೆಗೂ ಕಾರಣಕರ್ತಳಾಗಬಲ್ಲಳು ಕೃಷ್ಣನಿಗೆ ಮೊರೆಯಿಟ್ಟ ದ್ರೌಪದಿಯಂತೆ, ರಾಮನಿಗೆ ಕಾಯುತ್ತಿದ್ದ ಅಹಲ್ಯೆಯಂತೆ ಇಂದು

ಹೆಣ್ಣು ಯಾವ ಯುಗ ಪ್ರವರ್ತಕನಿಗೂ ಮೊರೆಯಿಡುವುದರಿಂದ ಪ್ರಯೋಜನವಿಲ್ಲ. ತನ್ನ ವಿಮೋಚನೆ ತನ್ನ ಕೈಯಲ್ಲಿಯೇ ಇದೆ ಎಂದು ಸಂಘಟಿತ ಸ್ತ್ರೀ ಶಕ್ತಿಗೆ ತನ್ನ ಕೈ ಜೋಡಿಸಬೇಕು.

ಹೆಣ್ಣಿನ ಘನತೆ ಗೌರವಗಳಿಗೆ ಪ್ರಾಶಸ್ತ್ಯ ಕೊಡದ ಯಾವುದೇ ಚಳುವಳಿ ಎಷ್ಟೇ ಪ್ರಗತಿಪರವೆಂದು ಹಣೆಪಟ್ಟಿ ಕಟ್ಟಿಕೊಂಡರೂ, ಅದರಿಂದ ಸ್ತ್ರೀ ವಿಮೋಚನ ಸಾಧ್ಯವಿಲ್ಲ. ತನ್ನ ಬೇಡಿಕೆಯನ್ನು ತನ್ನ ಅಗತ್ಯವನ್ನು ಅರಿತುಕೊಂಡು ಸ್ವಾಭಿಮಾನ ಆತ್ಮನಿಷ್ಠೆಯ ಸತ್ತ್ವದಿಂದ ಹೋರಾಟ ನಡೆಸಲು ಬೀದಿಗಿಳಿವ ಹೆಣ್ಣು ಯಾರ ನಾಲಿಗೆಗೂ ಅಂಜಬೇಕಿಲ್ಲ. ಯಾರ ಖಡ್ಗಕ್ಕೂ ತಲೆ ಬಾಗಬೇಕಿಲ್ಲ. ಇಂದು ಹೆಣ್ಣನ್ನು ಬಂದಿಸಿರುವ ಸಂಕೋಲೆಸಳು ಎಷ್ಟೇ ರಮಣೀಯವಾಗಿವೆಯೆಂದೂ, ಆ ಸಂಕೋಲೆಗಳು ಹೆಣ್ಣಿಗೆ ಆಭರಣದಂತೆ ಸುಂದರವಾಗಿ ಗೋಚರಿಸುತ್ತವೆಂದು ಸ್ವಹಿತಾಸಕ್ತ ಪುರುಷರು ಮತ್ತು ಸ್ತ್ರೀಯರು ವರ್ಣಿಸಿದರೂ ಅದಕ್ಕೆ ಮರುಳಾಗಬೇಕಾಗಿಲ್ಲ. ಸಂಘಟಿತವಾದ ಜಾಗೃತ ಸ್ತ್ರೀ ಪ್ರಜ್ಞೆ ಮಾತ್ರ ಈ ಸಂಕೋಲೆಯನ್ನು ಮುರಿಯಲು ಸಾಧ್ಯ. ಇದೊಂದು ಕಷ್ಟಕರವಾದ ಕೆಲಸವೆನಿಸಿದರೂ ಘನತೆಯ ರೂಪವೆತ್ತ ಆಧುನಿಕ ಸ್ತ್ರೀಯ ಆವಿರ್ಭಾವಕ್ಕೆ ಈ ದುರ್ಗಮವಾದ ಹಾದಿ ಸವೆಸದೆ ಬೇರೆ ಗತ್ಯಂತರವೇ ಇಲ್ಲ.

ಮಡಿದರೂ ಸರಿ, ತಲೆ ಎತ್ತಿ ನಿಲ್ಲುವುದೇ ಲೇಸು, ಬದುಕಲೆಂದು ಮಂಡಿಯೂರುವುದು ಬೇಡ. ಇಂದಿನ ಸ್ತ್ರೀ ಶಕ್ತಿ ಕೂಡ ಚಿಕ್ಕ ಪುಟ್ಟ ರಿಯಾಯಿತಿಗಳಿಗಾಗಿ ಆಮಿಷಕ್ಕಾಗಿ ಪುರುಷ ಪ್ರದಾನ ಸಮಾಜದ ಮೌಲ್ಯಗಳೊಂದಿಗೆ ರಾಜಿಮಾಡಿಕೊಳ್ಳಬೇಕಾಗಿಲ್ಲ, ಪುರುಷನ ಕೈಗೊಂಬೆಯಾಗುವುದರಲ್ಲಿ ನೆಮ್ಮದಿ ಇದೆ. ಸಂತೋಷವಿದೆಯೆಂದು ತೃಪ್ತಿಪಟ್ಟು ಆತ್ಮವಹೇಳನದ ಲಜ್ಜೆಗೆಟ್ಟ ಬದುಕು ಬಾಳುವುದಕ್ಕಿಂತ ಹೋರಾಟದ ಬದುಕು ಆರಿಸಿಕೊಳ್ಳುವುದರಲ್ಲಿ ಘನತೆಯಿದೆ. ಗೌರವವಿದೆ. ಹಾಗೂ ಸಾಧಕತೆಯಿದೆ. ಈ ಹೋರಾಟಕ್ಕಾಗಿ ಸಮಾಜದ ಒಟ್ಟು ಸ್ತ್ರೀ ಶಕ್ತಿ ಸಂಘಟಿತವಾದರೆ ಸ್ತ್ರೀಯರಿಗೇನೂ ನಷ್ಟವಿಲ್ಲ. ಅವರ ಸಂಕೋಲೆಯ ಕೊಂಡಿ ಕಳಚಿ ವಿಮೋಚನೆ ದೊರೆತು ಲಾಭವಾಗುತ್ತದಷ್ಟೇ. ಆದುದರಿಂದ ಸ್ತ್ರೀಯರು ತಮ್ಮ ಅಸ್ತಿತ್ವವನ್ನು ಅರಿಯುವಲ್ಲಿ ಮುಂದಾಗಬೇಕು.

- ಉಷಾ ಸಚೇತಿ

ಖಿಡಕಿಗಳು

ಈ ಮೊದಲು
ಖಿಡಕಿಗಳು ತೆರೆದುಕೊಂಡಾಗ
ಬಿಸಿಲಿನ ಧೂಪ ಸೆಳಕುಗಳು
ಕೋಣೆಯನ್ನು ತುಂಬುತ್ತಿದ್ದವು
ಬೆಳಕಿನಿಂದ ಹಾಗೂ ಸುವಾಸನೆಯಿಂದ

ಈ ಮೊದಲು
ಖಿಡಕಿಗಳು ತೆರೆದುಕೊಂಡಾಗ
ತೇಲಿಬಂದ ಗಾಳಿಯ ತೆರೆಗಳು

ಶೀತಲಗೊಳಿಸುತ್ತಿದ್ದವು
ನಮ್ಮ ಶರೀರವನ್ನು
ನಮ್ಮ ಮನಸ್ಸುಗಳನ್ನು
ಈ ಮೊದಲು
ಖಿಡಕಿಗಳು ತೆರೆದುಕೊಂಡಾಗ
ಗಲ್ಲಿಯಲ್ಲಿ ಹೋಗುವ
ಪ್ರತಿಯೊಬ್ಬವ
ಮನುಷ್ಯನಂತೆ ಕಾಣುತ್ತಿದ್ದ
ಪ್ರತಿಯೊಬ್ಬವ
ನಮ್ಮವನಾಗೇ ಕಾಣಸುತ್ತಿದ್ದ

ಆದರೆ
ಇಂದು ಯಾರೂ ಯಾವಾಗ್ಲೂ
ಖಿಡಕಿಗಳನು ತೆರೆಯುತ್ತಿಲ್ಲ
ಇರಲಿ ನೀವೇ ಹೇಳಿ
ಯಾರು ಹೆದರುವದ್ದಿಲ್ಲ
ಈ ಕಾಡಿಗೆ
ಈ ಕಗ್ಗತ್ತಲೆಗೆ
ಈ ನೀರವತೆಗೆ
ಈ ಕ್ರೂರ ತಮಾಶೆಗೆ...
ಆದರೆ....
ಬದುಕಲು
ನನ್ನ ಸ್ನೇಹಿತರೆ
ಈ ಖಿಡಕಿ ತೆಗೆಯುವ ಅವಶ್ಯಕತೆ ಇದೆ
ನಿಜವಾಗಿ ಬದುಕಲು
ಈ ಖಿಡಕಿ ತೆರೆಯುವ ಅಗತ್ಯತೆ ಇದೆ.

ಮೂಲ : ಗುರ್‌ಪ್ರೀತ್
ಅನುವಾದ : ಡಾ. ಬಸವರಾಜ ಕುಂಬಾರ

ನನ್ನ ಕನಸುಗಳನ್ನು ಕದ್ದವರು ಯಾರು?

ವಾಸ್ತವದ ಅನುಭವ ಹೊಂದುವವರೆಗೆ ನನಗೆ 'ಹೆಣ್ಣು' ಎಂಬ ಜೀವದ ಮೇಲೆ ಎಷ್ಟು ಅತ್ಯಾಚಾರ, ದಬ್ಬಾಳಿಕೆ ನಡೆಯುತ್ತಿದೆ ಎಂಬುದರ ಅರಿವು ನನಗಿರಲಿಲ್ಲ. ಸ್ವತಃ ಅನುಭವಿಸಿದ ಮೇಲೆ ಬದುಕುವುದರಲ್ಲಿ ಅರ್ಥವಿಲ್ಲ ಎನಿಸುತ್ತದೆ.

ಆದರೆ ಹಿಂದೆ ಹೀಗಿರಲಿಲ್ಲ. ಚಿಟ್ಟೆಯಂತೆ ಸ್ವಚ್ಛಂದ ಬಯಲಲ್ಲಿ ಆಟವಾಡುತ್ತಾ, ಜೀವನದಲ್ಲಿ ಮುಂದು ಬರಬೇಕೆ ಎಂದು ಎಷ್ಟೋ ಆಶಾಗೋಪುರಗಳನ್ನು ಕಟ್ಟಿ ಅವುಗಳನ್ನು ನನಸು ಮಾಡುವ ಕನಸು ಕಟ್ಟಿದ್ದೆ. ಕೊನೆಗೆ ಅವೆಲ್ಲಾ ಆಯ ತಪ್ಪಿದ ಕಟ್ಟಡದಂತೆ ಕುಸಿದುಬಿದ್ದವು.

ನಾನು ಮುಸ್ಲಿಂ ಜನಾಂಗದಲ್ಲಿ ಜನಿಸಿದವಳು. ಈ ಜನಾಂಗದಲ್ಲಿ ಹುಟ್ಟಿದರೂ ನನಗೆ ಪ್ರೌಢಾವಸ್ಥೆಗೆ ಕಾಲಿಡುವವರೆಗೆ ಯಾವುದೇ ಕೊರತೆಯಾಗಲೀ, ನೋವಾಗಲಿ ಇರಲಿಲ್ಲ. ಅಲ್ಲಿಯ ತನಕ ನಾನು ಎಲ್ಲರ ಮುದ್ದಿನ ಅರಗಿಣಿಯಾಗಿದ್ದೆ. ಆದರೆ ಈಗ ಪಂಜರದ ಗಿಣಿ ಯಾಗಿದ್ದೇನೆ.

ಪ್ರೌಢಾವಸ್ಥೆಯ ಮೊದಲ ಮೆಟ್ಟಿಲೆಂದರೆ ಅಂಜುವುದು ರೂಢಿಯಾಗಿ ಹೋಯಿತು. ಎದುರಿಸುವ ಧೈರ್ಯವಿಲ್ಲ ನನ್ನಲ್ಲಿ. 'ಬುರ್‌ಕಾ' ಹಾಕಿಕೊಳ್ಳಬೇಕೆಂಬ ಸಮಸ್ಯೆ ಎದುರಾದಾಗ ನನ್ನ ಪರದಾಟ ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಅಂದೆ ನನ್ನ ಉಜ್ವಲ ಬದುಕಿಗೆ ಕತ್ತಲು ಘುಸುಕಿತು. ಹಿಂದಿನಂತೆ ಹಾಡುವುದಾಗಲಿ, ಕುಣಿಯುವುದಾಗಲಿ, ಆಡುವುದಾಗಲಿ, ಹರಟೆ ಹೊಡೆಯುವುದಾಗಲಿ ಇರಲಿಲ್ಲ. ಇದಕ್ಕೆಲ್ಲಾ ಕಡಿವಾಣ ಬಿದ್ದಿತ್ತು. ಈಗ ಉಳಿದಿರುವುದು ಅವುಗಳ ಸವಿ ನೆನಪು.

"ಹೆಣ್ಣು ಮಗು" ಅಡುಗೆ ಮನೆಯನ್ನು ಬಿಟ್ಟು ಹೊರಗೆ ಬರಬಾರದು. ಅದು ಅವಳು ಇರಬೇಕಾದ ಸರಿಯಾದ ಸ್ಥಳ. ಅದು ಬಿಟ್ಟು, T.V. ಮುಂದೆ ಅಲ್ಲ, ಪುಸ್ತಕದ ಮುಂದೆ ಅಲ್ಲ. ಗೆಳತಿಯರ ಸಂಗಡದಲ್ಲಿಲ್ಲ ಎಂದು ಟೀಕಿಸುತ್ತಿದ್ದರು ನನ್ನ ತಂದೆ. ಅವನ್ನೆಲ್ಲಾ ನೋಡಿದರೆ ಮಗಳು ಕೆಟ್ಟು ಹೋಗುತ್ತಾಳೆಂಬ ಅಂಜಿಕೆ, ನಂಬಿಕೆ. 'ನಾನು ಹೇಳುವುದು ನಿನ್ನ ಒಳ್ಳೆಯದಕ್ಕೇ ಮಗಳೇ, ನಿನ್ನ ಕನಸುಗಳನ್ನು ಹಾಳು ಮಾಡಲು ನನಗಿಷ್ಟವಿಲ್ಲ" ಎಂದಿದ್ದರು ಅವರು.

ಮದುವೆಯಾದರೆ ಯಾವುದೇ ತೊಂದರೆ ಇಲ್ಲ. ಜೀವನದಲ್ಲಿ ಬೇಗ settle ಆಗಬಹುದು ಬೇಬಿ, ನಿನ್ನ ಮದುವೆ ಆಗುವ ಹುಡುಗ ಹೇಗಿದ್ದರೇನು? ಅವನು ನಿನ್ನ ಚೆನ್ನಾಗಿ ನೋಡಿಕೊಂಡರೆ ಸಾಕಲ್ಲವೆ? ಓದಿ ಯಾರು ಉದ್ಧಾರ ವಾಗಬೇಕು? ಅದರಲ್ಲೂ ನೀನು ಗಂಡನ ಮನೆಯಲ್ಲಿನ ಕಾರಬಾರನ್ನು ನೋಡಿಕೊಂಡರೆ ಸಾಲದೆ? ಏನೋ ಬೇಬಿ ನಿನ್ನ ಭವಿಷ್ಯ ಸುಂದರವಾಗಿ ರೂಪುಗೊಳ್ಳಲಿ ಎಂದು ನಾವೆಲ್ಲಾ ನಿನ್ನ ಮದುವೆ ಮಾಡಲು ನಿರ್ಧರಿಸಿದ್ದೇವೆ. ಇಲ್ಲದೆ ಇದ್ದರೆ ನನಗೇನು ಹುಚ್ಚೇ ನಿನ್ನ ಕನಸುಗಳನ್ನು ಒಡೆಯಲು? ಎಂದು ಅಮ್ಮ ಕೈ ತೊಳೆದುಕೊಂಡಿದ್ದರು.

ಇನ್ನೂ ಅಣ್ಣ ಮಹಾಶಯರ ಹೇಳಿಕೆಯಂತೆ 'ಬುರ್‌ಕಾ' ಅನಿವಾರ್ಯವಾಯಿತು. ಯಾರ ಮನೆಗೆ ಹೋಗುವಂತಿರಲಿಲ್ಲ. ನಿನಗೆ S.S.L.C. ಓದು ಸಾಕು. ಮುಂದಿನ ವ್ಯಾಸಂಗವೇನು ಬೇಕಾಗಿರಲಿಲ್ಲ. ಬೇಕಾಗೂ ಇಲ್ಲ. ಏನಾದರೂ ಹೆಚ್ಚು ಕಡಿಮೆಯಾದರೆ ಯಾರು ಜವಾಬ್ದಾರಿ. ಸುಮ್ಮನೆ ಮನೆಯಲ್ಲಿ ಇರು. ನಮ್ಮೆಲ್ಲರ ಆಸೆಯಂತೆ ಮದುವೆಯಾಗು. ಇದರಿಂದ ನಿನ್ನ ಕನಸುಗಳಿಗೆ ಯಾವುದೆ ತೊಂದರೆ ಇರುವುದಿಲ್ಲ. ಜೀವನ ಸುಧಾರಿಸುತ್ತದೆ. ನನಗೆ ನಿನ್ನ ಕನಸುಗಳನ್ನು ಹುಸಿ ಮಾಡುವ ಆಸೆ ಇಲ್ಲ ಎಂದಿದ್ದರು.

ಯಾರಿಗೂ ನನ್ನ ಆಸೆ ಆಕಾಂಕ್ಷೆ, ಗುರಿ ಇವುಗಳ ಅರಿವೇ ಇರಲಿಲ್ಲ. ಮೊದಲಿಗೆ ನನ್ನನ್ನೇ ಅರ್ಥಮಾಡಿಕೊಳ್ಳದೆ ಇರುವವರು ನನ್ನ ಬಯಕೆಗಳನ್ನೇಕೆ ಅರ್ಥಮಾಡಿಕೊಂಡಾರು? ಜೀವನದಲ್ಲಿ ಮದುವೆಯೇ ಅಂತಿಮ ಘಟ್ಟವೆಂದು ತಿಳಿದು ಅವರು ನನ್ನ ಭವಿಷ್ಯದ ಮೇಲೆ ಎಲ್ಲಿ ಗಮನ ಹರಿಸ್ಯಾರು. ಎಲ್ಲರೂ ನನ್ನ ಕನಸುಗಳನ್ನು ಕದಿಯಲು, ಹಾಳು ಮಾಡಲು ಇಷ್ಟವಿಲ್ಲಾ ಎನ್ನುತ್ತಾರಲ್ಲ. ಹಾಗಾದರೆ ನನ್ನ ಕನಸುಗಳನ್ನು ಕದ್ದವರು ಯಾರು?

- ರಹೀಮಾ ಬೇಗಮ್

ಕಡಿಮೆ ಮನುಷ್ಯರು

ವಯಸ್ಸಾದ ಮಹಿಳೆಯೊಬ್ಬಳು ಬಿದಿರಿನ ಬುಟ್ಟಿಯನ್ನು ಕಂಕುಳಲ್ಲಿ ಇಟ್ಟುಕೊಂಡು ಸೆರಗಲ್ಲಿ ಮೂಗುಮುಚ್ಚಿ ನಡೆಯುತ್ತಿದ್ದಾಳೆ. ಹಿಂದಿನಿಂದ ಕ್ಯಾಮರಾ ಆಕೆಯ follow ಮಾಡುತ್ತಿದೆ.

ದನಿಯೊಂದು ಕೇಳುತ್ತಿದೆ.

ಏನದು ಹೊತ್ತುಕೊಂಡು ಹೋಗುತ್ತಿರುವುದು?

ಹೊಲಸು.

ಏನು?

ಹೇಲು, ಸಾಕು ಇನ್ನು ಹೊರಡಿ, ಹಿಂದೆ ಬಂದದ್ದು ಸಾಕು ಸುಮ್ಮನೆ ಹೋಗಿ. ಮತ್ತೇನೂ ಕೇಳಬೇಡಿ.

ಇನ್ಯಾವುದೋ ದೊಡ್ಡವರ ಮನೆಯಲ್ಲಿ ಕಡಿಮೆ ಮನುಷ್ಯಳೊಬ್ಬಳು ಪೊರಕೆಯಲ್ಲಿ ಹೇಲಿನ ಗುಡ್ಡೆ ಬಳಿದು ಟಿನ್ ಡಬ್ಬಕ್ಕೆ ತುಂಬುತ್ತಿದ್ದಾಳೆ. ಬೀದಿಯಲ್ಲಿನ ಮೋರಿಯೊಳಗಿನ ಹೊಲಸನ್ನು ಪೊರಕೆ ಹಿಡಿದು ತೊಳೆಯುತ್ತಿದ್ದಾಳೆ. ಪುಟ್ಟ ಹುಡುಗನೊಬ್ಬ ಅವಳ ಸಹಾಯಕ್ಕೆ. ಬಳಿದ ಹೇಲನ್ನು ತಲೆಯ ಮೇಲೆ ಹೊತ್ತು ಮತ್ತೊಬ್ಬ ಹೆಂಗಸು ಸಾಗಿಸುತ್ತಿದ್ದಾಳೆ.

ಇದು ಗುಜರಾತಿನ ಹಳ್ಳಿಯೊಂದರ ಚಿತ್ರ. ಮುಂಬೈನಂತಹ ಮಹಾನಗರದಲ್ಲಿ Manhole ಕಟ್ಟಿಕೊಂಡಿದೆ. 18-19 ವಯಸ್ಸಿನ ಹುಡುಗನೊಬ್ಬನಿಗೆ ಸೊಂಟಕ್ಕೆ ಹಗ್ಗ ಬಿಗಿದು Manholeನ ಮುಚ್ಚಳ ತೆಗೆದು ಒಳಕ್ಕೆ ಇಳಿಸಲಾಗುತ್ತದೆ. ಹುಡುಗನ ಮೈ ಮೇಲೆ ಒಂದು ಚಡ್ಡಿ, ತಲೆ ಮೇಲೆ ಪ್ಲಾಸ್ಟಿಕ್ ಟೋಪಿ. ಕೆಳಗೆ ಇಳಿದ ಹುಡುಗನ ಸೊಂಟದವರೆಗೆ ಹೊಲಸಿನ ನೀರು. ನೋಡು ನೋಡುತ್ತ ಹೊಲಸು ಕುತ್ತಿಗೆವರೆಗೂ ಬಂದು ಹಣೆಯವರೆಗೂ ಬಂದು ಹುಡುಗನ ತಲೆ ಹೊಲಸಿನೊಳಗೆ ಮರೆಯಾಯ್ತು. ಮೇಲೆದ್ದಾಗ ಬಕೇಟು ಬರ್‍ತಿ ಕಟ್ಟಿಕೊಂಡಿದ್ದ ಹೊಲಸು ಕೈಯಲ್ಲಿ. ಹೊಲಸು, ಹಗ್ಗದೊಂದಿಗೆ ಮೇಲೆ ಮೇಲೆ ಬರುತ್ತಿದ್ದ ಹಾಗೆ ಮೇಲಿದ್ದವ ಬಕೇಟು ತೆಗೆದುಕೊಂಡು ಬಕೇಟಿನಲ್ಲಿ ಹೆಚ್ಚಾಗಿದ್ದ ಹೊಲಸು ನೀರನ್ನು ಮತ್ತೆ ಗುಂಡಿಗೆ ಚೆಲ್ಲಿದ, ಕೆಳಗಿದ್ದವ ಮೇಲೆ ನೋಡುತ್ತಿದ್ದ. ನೀರನ್ನು ಚೆಲ್ಲಿನ ಮೇಲೆ ಗಟ್ಟಿ ಹೊಲಸಿನ ಕೆಸರನ್ನು ಹೊರಗೆ ಸುರಿದು ಮತ್ತೆ ಗುಂಡಿಯೊಳಗೆ ಬಿಟ್ಟ. ಹುಡುಗನ ತಲೆ ಮತ್ತೆ ಹೊಲಸಿನೊಳಗೆ ಮರೆಯಾಯ್ತು.

ಇದು ಲೆಸ್ಸರ್ ಹೊಮನ್ ಕಿರುಚಿತ್ರದ ಕೆಲ ದೃಶ್ಯಗಳು. ಗುಜರಾತಿನ ಹೇಲು ಬಳಿಯುವ 'ಭಂಗಿ' ಜಾತಿಯವರನ್ನು ಕುರಿತು ಕೆ. ಸ್ಟಾಲಿನ್ ಅವರು ಈ ಕಿರುಚಿತ್ರವನ್ನು ಅಹಮದಾಬಾದಿನ ದೃಷ್ಟಿಮೀಡಿಯಾ ಕಲೆಕ್ಟಿವ್ ಅವರಿಗಾಗಿ ಮಾಡಿದ್ದಾರೆ. ಅವರ ನೋವು, ಸಂಕಟ, ಹೋರಾಟ ಕುರಿತು ಚಿತ್ರಿಸಲಾಗಿದೆ. ಅತ್ಯಂತ ಕಡಿಮೆ ಸಂಬಳಕ್ಕೆ ದುಡಿವ ಈ ಜನರ ಬದುಕು ಕರುಳು ಕಿವುಚುತ್ತದೆ. ಕೇವಲ ೨೫, ೫೦ ರೂಪಾಯಿಗೆ ಅನೇಕ ಮಹಿಳೆಯರು ಈ ಕೆಲಸ ಮಾಡುತ್ತಿದ್ದಾರೆ. ಗಂಡಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಎಷ್ಟೋ ಮಹಿಳೆಯರಿಗೆ ಸಂಬಳವೇ ಇಲ್ಲ. ಸಂಬಳದ ಬದಲಿಗೆ ದೊಡ್ಡ ಮನೆಯವರು ಊಟ ಕೊಡುತ್ತಾರೆ. ಅದೂ ಬೆಳಗ್ಗೆ ಹೊಲಸು ಬಳಿದು ಹೋದರೆ ರಾತ್ರಿ ಪಾತ್ರೆ ಹಿಡಿದು ಬಂದು ಕೂಗಿಕೊಂಡರೆ ಊಟ ಪಾತ್ರೆಗೆ ಬೀಳುವುದು. ಹೊಟ್ಟೆ ಪಾಡಿಗೆ ಹೇತು ಗುಡ್ಡೆ ಮಾಡಿದ ಹೇಲನ್ನು ಹೊತ್ತು ಸಾಗಿಸುವ ವೃತ್ತಿಯಲ್ಲಿ ತೊಡಗಿದ್ದಾರೆ ಮಹಿಳೆಯರು ಮತ್ತು ಮಕ್ಕಳು. ಆಧುನಿಕ ಶೌಚಾಲಯದ ವ್ಯವಸ್ಥೆಯನ್ನು ಇನ್ನೂ ಅಳವಡಿಸಿಕೊಂಡಿಲ್ಲ ಇಲ್ಲಿನ ದೊಡ್ಡ ಮನುಷ್ಯರು. ಮನೆಯಲ್ಲಿ ಗುಂಡಿತೋಡಿ ಅದನ್ನು ಕಕ್ಕಸ್ಸಿನಂತೆ ಉಪಯೋಗಿಸುತ್ತಾರೆ. ಮೂಗು ಮುಚ್ಚಿ ಹೇತು ಬಂದರೆ ಭಂಗಿಗಳು ಮೂಗು ಮುಚ್ಚಿಕೊಂಡು ತಲೆ ಬಾಗಿಸಿ ಹೊಲಸು ಬಳಿಯುತ್ತಾರೆ.

ಶಿಕ್ಷಣವಿಲ್ಲದೆ, ಇತರೆ ವೃತ್ತಿಗೆ ಹೋಗುವ ಧೈರ್ಯ, ಬೆಂಬಲವಿಲ್ಲದೆ ಇದೇ ವೃತ್ತಿಯಲ್ಲಿ ಭಂಗಿಯ ಜನರು ತೊಡಗಿದ್ದಾರೆ. ಶಾಲೆಯಲ್ಲಿ ಅವಮಾನ, ತಾರತಮ್ಯ ಅನುಭವಿಸಿ ಕೊಂಚ ಓದು ಬರಹ ಕಲಿತರೂ ಯಾರೂ ಬೇರೆ ಉದ್ಯೋಗಕ್ಕೆ ಸೇರಿಸಿಕೊಳ್ಳದೆ ಮತ್ತೆ ಹೇಲು ಬಾಚುವ ವೃತ್ತಿಗೆ ಮರಳಬೇಕು. ನಾನು ಕಷ್ಟಪಟ್ಟು ಓದು-ಬರಹ ಕಲಿತೆ ಆದರೂ ಇದೇ ವೃತ್ತಿಯಲ್ಲಿದ್ದೇನೆ, ಇದಕ್ಕಾಗಿ ಯಾಕೆ ಓದು ಬೇಕಿತ್ತು ಎಂದು ಪ್ರಶ್ನಿಸುತ್ತಾಳೆ ಭಂಗಿ ಮಹಿಳೆಯೊಬ್ಬಳು.

ನನಗೆ ದಾದಿಯೊ, ವೈದ್ಯೆಯೋ ಆಗುವ ಆಸೆ ಇತ್ತು. ನಮಗೆ ಕಲಿಸುವರಾರು? ಅವಮಾನಿಸದೆ ನಮ್ಮನ್ನು ಮನುಷ್ಯರೆಂದು ಪರಿಗಣಿಸಿ ಓದು ಬರಹ ಯಾರು ಕಲಿಸುತ್ತಾರೆ? ಎಂದು ಪುಟ್ಟ ಹುಡುಗಿಯ ದೊಡ್ಡ ಕಂಗಳ ತುಂಬಾ ನೀರು.

"ನಮ್ಮನ್ನು ತಗುಲಿಸಿಕೊಂಡರೆ ಹೋಗಿ ಮೋರಿಯಲ್ಲಿನ

ನೀರೊಳಗೆ ಹೆಬ್ಬೆಟ್ಟನ್ನು ಅದ್ದಿಕೊಳ್ಳುವರು ನಾವು ಮೋರಿ ನೀರಿಗಿಂತಲೂ ಹೊಲಸ್" ಎಂದಳು ಮತ್ತೊಬ್ಬ ಪುಟಾಣಿ.

ಚಿತ್ರದಲ್ಲಿ - ನಮ್ಮ ಊರಿನಲ್ಲಿ ನಾನು ಈ ಕೆಲಸ ಮಾಡುತ್ತಿರಲಿಲ್ಲ. ಮದುವೆಯಾಗಿ ಈ ಊರಿಗೆ ಬಂದೆ, ಗಂಡ ಈ ಕೆಲಸ ಮಾಡು ಎಂದಾಗ ಮಾಡುವುದಿಲ್ಲ ಎಂದೆ ಎಂದಳು ಹೆಂಗಸೊಬ್ಬಳು. ಪಕ್ಕದಲ್ಲಿ ಕೂತಿದ್ದ ಗಂಡ ಹೇಳಿದ - ಮದುವೆಯಾಗಿ ಬಂದ ಮೇಲೆ ಗಂಡ ಹೇಳಿದ ಕೆಲಸ ಮಾಡಲೇಬೇಕು. ಮಾಡದಿದ್ದರೆ ಆಗುವುದಿಲ್ಲ, ಹೊಟ್ಟೆ ಪಾಡೇನೂ ಎಂದು ಬಲವಂತ ಮಾಡಿದೆ, ಆಮೇಲೆ ಮಾಡಲು ಶುರು ಮಾಡಿದಳು. ಗಂಡಸರು ಏನು ಮಾಡುತ್ತಾರೆ? ಕೂತು ಬೀಡಿ ಸೇದುತ್ತಾರೆ. ಹಿಂಸೆ ಮಾಡಿ ನನ್ನನ್ನು ಹೊಲಸೆತ್ತುವ ಕೆಲಸಕ್ಕೆ ಹಚ್ಚಿದರು. ಈಗ ಅಭ್ಯಾಸವಾಗಬಿಟ್ಟಿದೆ ಎಂದಳು ಆ ಹೆಂಗಸು.

ಬೇರೇನೂ ಮಾಡುವ ಅವಕಾಶವಿಲ್ಲದ ಭಂಗಿ ಜನರು ತಾವು ಮಾಡುವ ಕೆಲಸಕ್ಕೆ ಹೆಚ್ಚಿನ ಸಂಬಳ ಕೊಡುವಂತೆ ಒತ್ತಾಯಿಸಿ ಮುಷ್ಕರ ನಡೆಸಿದಾಗ ದೊಡ್ಡ ಮನುಷ್ಯರು ಹೊಲಸೆತ್ತುವ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿ ಭಂಗಿಗಳ ಅನ್ನಕ್ಕೂ ಕಲ್ಲು ಹಾಕುವ ಸಂಚು ನಡೆಸಿದರು. ನಮ್ಮ ಕೆಲಸ ಕಿತ್ತುಕೊಳ್ಳಬೇಡಿರೆಂದು ಗುತ್ತಿಗೆದಾರರನ್ನು ಒತ್ತಾಯಿಸಿದಾಗ ಅವರನ್ನು ಹೊಡೆದು ಥಳಿಸಿದರೆಂದು ಆರೋಪಿಸಿ ಅವರನ್ನು ಪೊಲೀಸರ ಹಿಂಸೆಗೂ ಗುರಿಪಡಿಸಲಾಯ್ತು. ನಿರಂತರವಾಗಿ ನಡೆಸಿದ ಹೋರಾಟದ ಫಲವಾಗಿ ಹೊಲಸನ್ನು ಹೊರುವ ಕೆಲಸವನ್ನು ಆ ಹಳ್ಳಿಯಲ್ಲಿ ನಿಲ್ಲಿಸಲಾಗಿದೆ. ವಿಪರ್ಯಾಸವೆಂದರೆ ಸಂವಿಧಾನದಲ್ಲಿ, ಕಾನೂನಿನಲ್ಲಿ ಹೇಲು ಹೊರುವ ಕೆಲಸವನ್ನು ಎಂದೋ ನಿಷೇಧಿಸಲಾಗಿದೆ. ಮುನಿಸಿಪಾಲಿಟಿಯಲ್ಲೂ ಭಂಗಿ ಜನರು ಕೆಲಸ ಮಾಡುತ್ತಿದ್ದಾರೆ.

ಕಕ್ಕಸನ್ನು ಎತ್ತಲು ತಗಡು ಬಳಸುವುದರಿಂದ ಕೈಗೆ ಕಕ್ಕಸು ತಗಲುವುದೆಂದು ಅಲ್ಲಿನ ಮುನಿಸಿಪಾಲಿಟಿಯವರನ್ನು ಪೊರಕೆ ನೀಡಿ ಎಂದು ಕೇಳಿದಾಗ ಪೊರಕೆ ಕೊಡಲು ಅವರು ನಿರಾಕರಿಸಿದರು. ಕಾರಣ 2 ರೂಪಾಯಿನ ಪೊರಕೆ ಒದಗಿಸಲು ಬಡ್ಜೆಟ್‌ನಲ್ಲಿ ಹಣವಿಲ್ಲ! ಚಿತ್ರದಲ್ಲಿ ಹಳ್ಳಿಯ ರಾಜಕೀಯ ವ್ಯಕ್ತಿಗಳ ಸಂದರ್ಶನವನ್ನು ಮಾಡಲಾಗಿದ್ದು ಸಂದರ್ಶನದಲ್ಲಿ ಒಬ್ಬ ವ್ಯಕ್ತಿ-ಈಗೆಲ್ಲ ಆಧುನಿಕ ಶೌಚಾಲಯದ ವ್ಯವಸ್ಥೆ ಎಲ್ಲೆಡೆ ಬಂದಿದೆ. ಹೇಲು ಹೊರುವ ಪದ್ಧತಿಯೇ ಇಲ್ಲವೆಂದ, ಪಕ್ಕದಲ್ಲಿದ್ದ ಮತ್ತೊಬ್ಬ ರಾಜಕೀಯ ವ್ಯಕ್ತಿ ಅವನು ಹೇಳಿದ್ದು ಸರಿಯಲ್ಲ, ಈಗಲೂ ಹಳೆಯ ಶೌಚಾಲಯದ ವ್ಯವಸ್ಥೆ ಹಲವೆಡೆ ಇವೆ, ಅಲ್ಲೆಲ್ಲ ಹೊಲಸನ್ನು ಸಾಗಿಸುವ ಕೆಲಸವನ್ನು ಭಂಗಿ ಜನರೆ ಮಾಡುತ್ತಿದ್ದಾರೆ ಎಂದು ಹೇಳಿದ! ಈ ರಾಜಕೀಯ ನಾಯಕರುಗಳಿಗೆ ಹೇಲು ಹೊರುವ ಪದ್ಧತಿ ಇದೆ ಎಂದು ಹೇಳಿಕೊಳ್ಳುವುದು ಅವಮಾನಕರ, ಹೊರುವುದನ್ನು ನೋಡುವುದು ಅವಮಾನವಲ್ಲ.

ಸಾಲಾಗಿರುವ ಕಕ್ಕಸು ಮನೆಗಳು ಮೂಗಿಗೆ ಸೆರಗು ಮುಚ್ಚಿರುವ ಹೆಂಗಸೊಬ್ಬಳು ತುದಿಯಲ್ಲಿ ಅಗಲವಾಗಿರುವ ಕಬ್ಬಿಣದ ಕೊಳವೆಯೊಂದರಿಂದ ಹೇಲಿನ ಗುಡ್ಡೆಯನ್ನು ತಳ್ಳುತ್ತಾ ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೋಗುವಳು. ಎಲ್ಲ ಮುಗಿಸಿದ ಮೇಲೆ ಮಣ್ಣಿನಲ್ಲಿ ತಗಡನ್ನು ಹೊರಳಾಡಿಸಿ ಇನ್ನು ನೀವು ಪೋಟೋ ತೆಗೆದದ್ದು ಸಾಕು ಇನ್ನು ಹೊರಡಿ ಎಂದು ಹೋಗುವಳು. ಅವಳಿಗೆ ಸಹಾಯಕನಾದ ಪುಟ್ಟ ಮಗ ಅವಳ ಹಿಂದೆ ಹೋಗುವನು. ಇದು ಚಿತ್ರದ ಕೊನೆಯ ದೃಶ್ಯ.

ಎಲ್ಲಿಯವರೆಗೂ ಅವರು ಹೀಗಿರಬೇಕು. ಅವಮಾನ ಅನುಭವಿಸಬೇಕು? ಭಂಗಿ ಜನರ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಮಾರ್ಟಿನ್ ಅವರು ಸಿನಿಮಾ ಮುಗಿದ ಮೇಲೆ ಚರ್ಚೆಯಲ್ಲಿ ಒಂದು ಪ್ರಸಂಗವನ್ನು ಹೇಳಿದರು. ಗುಜರಾತಿನಲ್ಲಿ ಜೈನರು ತುಂಬಾ ಶ್ರೀಮಂತರು. ಅವರುಗಳ ಬಳಿ ಹೋಗಿ ನೀವೇಕೆ ಫ್ಲಶ್ ಮಾಡುವಂತಹ ಶೌಚಾಲಯವನ್ನು ಕಟ್ಟಿಸಿಕೊಳ್ಳಬಾರದು ಎಂದು ಕೇಳಿದಾಗ ಅವರೆಂದರಂತೆ - ನಾವು ಜೈನರು, ನೀರು ಹಾಕಿ ಫ್ಲಶ್ ಮಾಡಿದರೆ ಕಕ್ಕಸ್ಸಿನಲ್ಲಿರುವ ಜಂತುಗಳು ಸತ್ತು ಹೋಗುತ್ತವೆ. ಹಿಂಸೆ ಮಾಡಿದಂತಾಗುತ್ತದೆ, ಆ ಕಾರಣಕ್ಕೆ ನಾವು ಆಧುನಿಕ ಶೌಚಾಲಯುಗಳನ್ನು ಕಟ್ಟಿಸುವುದಿಲ್ಲ. ಈ ಅಹಿಂಸಾವಾದಿಗಳಿಗೆ ತಮ್ಮ ಹೇಲನ್ನು ತಾವು ಎತ್ತುವುದು ಹಿಂಸೆ ಬೇರೊಬ್ಬರಿಂದ ಎತ್ತಿಸುವುದು ಅಹಿಂಸೆ? ಇಂತಹ ಅಹಿಂಸಾವಾದಿಗಳಿರುವವರೆಗೂ ಭಂಗಿ ಜನರ ಮೇಲಿನ ಹಿಂಸೆ ತಪ್ಪುವುದಿಲ್ಲ. ನಾವೂ ಅಷ್ಟೇ, ಸಿನಿಮಾ ನೋಡಿ, ಚರ್ಚೆ ಮಾಡಿ, its very touching ಎಂದು, ಏನಾದರೂ ಮಾಡಬೇಕೆಂದು ಬಾಯಲ್ಲಿ ಪ್ಲಾನ್ ಮಾಡುತ್ತೇವೆ. ನಂತರ ಮನೆಗೆ ಹೋಗಿ ಬಿಸಿಯೂಟ ತಿಂದು ಬೆಚ್ಚಗೆ ಮಲಗಿ ಬೆಳಗೆದ್ದು ಸುಸಜ್ಜಿತವಾದ ಕಕ್ಕಸುಗಳಲ್ಲಿ ಹೇತುಬಿಡುತ್ತೇವೆ. ಕಟ್ಟಿಕೊಂಡರೆ BCCಯ ತೋಟಿ ಉಂಟು ತೆಗೆಯಲು, ದಾದಿಯೊ, ವೈದ್ಯೆಯೊ ಆಗಬೇಕೆನ್ನುವ ಪುಟ್ಟ ಹುಡುಗಿಯ ಕನಸು ಅವಳ ಕಣ್ಣೀರಿನಲ್ಲಿ ಹರಿದು ಹೋಗುತ್ತಲೇ ಇರುತ್ತದೆ, ನಾವು ಹೇಳುತ್ತಲೆ ಇರುತ್ತೇವೆ.

- ಸರಸ್ವತಿ ದು.

ಮರಣಪೂರ್ವ ವರದಿಯನ್ನೇ ತಿರುಚಿದ ರಾಕ್ಷಸರು

ಶೋಭಾಳನ್ನು ಕಂಡು ಕೃಷ್ಣಪ್ಪನಿಗೆ ಆಸಕ್ತಿ ಬೆಳೆಯಲಾರಂಬಿಸಿದಾಗ ಅವಳಿಗಿನ್ನೂ ಹದಿನಾರರ ಹರಯ. ಸಂಬಂಧಿಕರಾದ್ದರಿಂದ ಶೋಭಾ-ಕೃಷ್ಣಪ್ಪರ ಮದುವೆಯಾಗುವುದು ಸುಲಭವೆ ಆಗಿತ್ತು. ಆದರೆ ಅದು ಹಾಗಾಗಲಿಲ್ಲ. ಶೋಭಾಳ ತಂದೆ - ತಾಯಂದಿರಿಗೆ ತಮ್ಮ ಮಗಳನ್ನು ಕೃಷ್ಣಪ್ಪನಿಗೆ ಕೊಡುವುದು ಇಷ್ಟವಿರಲಿಲ್ಲ. ಅನೇಕ ದಿನಗಳ ಮಾತುಕತೆ ಮತ್ತು ಪುಸಲಾಯಿಸುವಿಕೆಯ ನಂತರ ಕೃಷ್ಣಪ್ಪ ನಂತಹ ಬಣ್ಣಹಚ್ಚುವ ದಿನಗೂಲಿ ಕಾರ್ಮಿಕನೊಡನೆ ಶೋಭಾಳ ಮದುವೆಯಾಯಿತು.

ಶೋಭಾಳ ತಂದೆ - ತಾಯಿಯರೂ ದಿನಗೂಲಿ ಕಾರ್ಮಿಕರು. ಮಗಳಿಗೆ ಅದ್ದೂರಿಯಾಗಿ ಮದುವೆ ಮಾಡಿಸುವುದು ಅವರಿಗೆ ಸಾಧ್ಯವಿರಲಿಲ್ಲ. ಆದರೂ ಮದುವೆಯ ಸಮಯದಲ್ಲಿ ಮಗಳಿಗೆ ಎರಡು ಸವರನ್ನಿನ ಚಿನ್ನಾಭರಣ ಮಾಡಿಸಿ ಹಾಕಿದ್ದರು, ಕೃಷ್ಣಪ್ಪನ ಉಡಿಗೆ ಐದುಸಾವಿರ ರೂಪಾಯಿಯನ್ನು ತುಂಬಿದ್ದರು.

ಶೋಭಾಳ ಸಾಂಸಾರಿಕ ಜೀವನ ಹಿತಕರವಾಗೇನೂ ಇರಲಿಲ್ಲ. ಅವಳ ಆಭರಣಗಳೆಲ್ಲಾ ಮದುವೆಯಾದ ಕೆಲವೆ ದಿವಸಗಳಲ್ಲಿ ಕೃಷ್ಣಪ್ಪನ ಪಾಲಾಗಿದ್ದವು. ಶೋಭಾಳ ಅತ್ತೆ ಮನೆಯ ವಾಸ ನರಕಯಾತನೆ ಎನಿಸಲಿಕ್ಕಾಗಿಯೇ ಎಂಬಂತೆ ಕೃಷ್ಣಪ್ಪನ ಇಬ್ಬರೂ ತಂಗಿಯರು ಮನೆಯಲ್ಲಿದ್ದರು. ಇದಲ್ಲದೆ ಕೃಷ್ಣಪ್ಪ ಪ್ರತಿನಿತ್ಯ ಕುಡಿದು ಮನೆಗೆ ಬರತೊಡಗಿದ. ಶೋಭಾಳನ್ನು ಹೊಡೆದು-ಬಡಿದು ಹಿಂಸಿಸುತ್ತಿದ್ದ. ತನ್ನ ಹೊಸ ವ್ಯಾಪಾರಕ್ಕಾಗಿ ಅಪ್ಪನ ಮನೆಯಿಂದ ಮೂರು ಸಾವಿರ ರೂಪಾಯಿ ತಂದುಕೊಡು ಎಂದು ಪೀಡಿಸತೊಡಗಿದ. ಶೋಭಾಳ ತಂದೆ-ತಾಯಿ ಸಾಲ-ಸೋಲ ಮಾಡಿಯಾದರೂ ಸರಿ ಮಗಳ ಸಾಂಸಾರಿಕ ಜೀವನ ಚೆಂದವಾಗಲಿ ಎಂದು ದುಡ್ಡು ಹೊಂಚಿದರು. ಕೆಲವೆ ದಿನಗಳಲ್ಲಿ ಮತ್ತಷ್ಟು ದುಡ್ಡು ತರಬೇಕೆಂದು ಕೃಷ್ಣಪ್ಪ ಮಡದಿಯನ್ನು ಕೋಲಾರದಲ್ಲಿದ್ದ ತವರಿಗೆ ಅಟ್ಟಿದ್ದ. ಈ ಬಾರಿ ಶೋಭಾಳಿಗೆ ಗಂಡನ ಮನೆಗೆ ಹಿಂದಿರುಗುವ ಆಸೆಯೆ ಇರಲಿಲ್ಲ. ಆದರೆ ಮಗಳ ಭವಿಷ್ಯ ಕುರಿತು ಭಯವಿದ್ದ ಅಪ್ಪ-ಅಮ್ಮ ಕೃಷ್ಣಪ್ಪನನ್ನು ಮನೆಗೆ ಕರೆಸಿದರು. ಗಂಡ-ಹೆಂಡತಿ ಇಬ್ಬರೇ ಬೇರೆ ಮನೆ ಮಾಡುವುದಾದರೆ ಐದು ಸಾವಿರ ರೂಪಾಯಿಗಳನ್ನು ಹೊಂಚಿಕೊಡುವುದಾಗಿ ಬುದ್ಧಿ ಹೇಳಿದರು. ಅವರ ಮಾತುಗಳಿಗೆ ತಲೆದೂಗಿದ ಕೃಷ್ಣಪ್ಪ ಹೆಂಡತಿಯೊಡನೆ ತನ್ನೂರಿಗೆ ಮರಳಿದ. ಈ ಸುದ್ದಿ ತಿಳಿದ ಕೃಷ್ಣಪ್ಪನ ತಾಯಿ ಕುಪಿತಳಾದಳು. ಶೋಭಾಳನ್ನು ಮನೆಯಾಚೆಗಟ್ಟಿದಳು, ಯಾರದೋ ಮನೆಯಲ್ಲಿ ಶೋಭಾ ದಿನಗಳೆಯುವಂತೆ ಮಾಡಿದಳು.

ಕೆಲವು ದಿನಗಳಲ್ಲಿಯೇ ತಮ್ಮ ಜೀವನವನ್ನು ಸರಿದಾರಿಗೆ ತರುವ ಕನಸಿನೊಡನೆ ಶೋಭಾ-ಕೃಷ್ಣಪ್ಪ ಹೊಸಮನೆ ಮಾಡಿದರು. ಅವರ ಕನಸು ಸಾಕಾರಗೊಳ್ಳುವುದು ಅಸಾಧ್ಯವಾಗಲಿ ಎಂಬಂತೆ ಅತ್ತೆ ತನ್ನ ಮನೆಯನ್ನು ಇವರ ಹಿತ್ತಲಿನ ಬೀದಿಗೆ ಬದಲಿಸಿಕೊಂಡಳು. ಬಿಡುವು ಸಿಕ್ಕಾಗೆಲ್ಲ ಶೋಭಾಳ ಮನೆಗೆ ಎಡತಾಕಿ, ಶೋಭಾ ತಂದಿಟ್ಟಿದ್ದ ಸಣ್ಣಪುಟ್ಟ ಪಾತ್ರೆಗಳನ್ನು ಹೊತ್ತೊಯ್ಯುತ್ತಿದ್ದಳು.

ಈ ಸಮಸ್ಯೆಯ ಜೊತೆಗೆ ಕೃಷ್ಣಪ್ಪನ ಕುಡಿತ ಹೆಚ್ಚಾಯಿತು. ಅವನಿಗೆ ಶೋಭಾಳೊಡನೆ ಜಗಳಾಡದಿದ್ದರೆ ನಿದ್ದೆ ಬರುವುದೇ ಇಲ್ಲವೋ ಎನ್ನುವಂತಾಯಿತು. ಶೋಭಾ ಮಾಡುವ ಎಲ್ಲಾ ಕೆಲಸದಲ್ಲಿಯೂ ತಪ್ಪು ಹುಡುಕತೊಡಗಿದ ಕೃಷ್ಣಪ್ಪ, ಕೈಗೆ ಸಿಕ್ಕದ್ದರಲ್ಲಿ ಅವಳನ್ನು ಹೊಡೆಯತೊಡಗಿದ. ಕೆಲವೊಮ್ಮೆ ಜಗಳಕ್ಕೆ ಕಾರಣವೇ ಬೇಕಾಗಿರಲಿಲ್ಲ. ತನ್ನ ದಿನಗೂಲಿಯನ್ನು ಶೋಭಾಳ ಕೈಗಿರಿಸುವುದನ್ನೂ ನಿಲ್ಲಿಸಿದ. ಕೃಷ್ಣಪ್ಪ ಅಡಿಗೆಯಲ್ಲಿ ಮಾತ್ರ ಭಕ್ಷ್ಯ ಭೋಜ್ಯಗಳನ್ನೇ ಬಯಸತೊಡಗಿದ. ಶೋಭಾಳಿಗೆ ತನ್ನ ಮನೆಯನ್ನು ನಡೆಸುವ ದಾರಿಯೇ ಹೊಳೆದಿರಲಿಲ್ಲ. ತನಗೆ ಚೂರುಪಾರು ಗೊತ್ತಿದ್ದ ಹೊಲಿಗೆಯ ಕೆಲಸದಿಂದ ಪುಡಿಗಾಸು ಸಂಪಾದಿಸಿ ಸಂಸಾರ ತೂಗಿಸಲು ಪ್ರಯತ್ನಿಸುತ್ತಿದ್ದಳು. ಹೀಗೆ ಸಂಪಾದಿಸಿದ್ದರಲ್ಲೇ ಕೊಂಚ ಹಣ ಉಳಿಸಿ ಬರುವ ಹಬ್ಬಕ್ಕೆ ಹೊಸ ಸೀರೆ ಕೊಳ್ಳುವ ಕನಸು ಕಟ್ಟಿಕೊಂಡು ತವರಿಗೆ ಪತ್ರ ಬರೆದಿದ್ದಳು. ಹಬ್ಬದ ಹೊತ್ತಿಗೆ ಮಗಳು ಮನೆಗೆ ಬರುವಳೆಂದು ಕಾಯುತ್ತಿದ್ದ ಅಪ್ಪ-ಅಮ್ಮನಿಗೆ ಸಿಕ್ಕದ್ದು ಮಗಳು ಸುಟ್ಟಗಾಯದಿಂದ ಆಸ್ಪತ್ರೆ ಸೇರಿದ್ದಾಳೆಂಬ ಸುದ್ದಿ!

ಮಾರ್ಚ್ 7ರಂದು ಕೃಷ್ಣಪ್ಪ ಕಳಿಸಿದ್ದ ಹುಡುಗನಿಂದ ಅಡಿಗೆ ಮಾಡುತ್ತಾ ಶೋಭಾಳಿಗೆ ಬೆಂಕಿ ತಾಗಿತೆಂಬ ಸುದ್ದಿ ತಿಳಿದು ಬೆಂಗಳೂರಿಗೆ ಧಾವಿಸಿ ಬಂದರು. ಅವರಿಗೆದುರಾದದ್ದು ಬೀಗ ಬಿದ್ದ ಶೋಭಾಳ ಮನೆಯ ಬಾಗಿಲು. ನೆರಮನೆಯವರ ಬಳಿ

ವಿಚಾರಿಸಿದಾಗ ಶೋಭಾ ಹಿಂದಿನ ದಿನವೆ ತೀರಿಕೊಂಡಳೆಂದು ತಿಳಿದು ಅವರು ನಿಂತ ನೆಲ ಕುಸಿಯಿತು.

ಸ್ಮಶಾನದಲ್ಲಿ ಮುಖವನ್ನುಳಿದು ಇನ್ನೆಲ್ಲವೂ ಸುಟ್ಟಿದ್ದ ಶೋಭಾಳ ದೇಹ ಕಂಡವರಿಗೆ ಅನುಮಾನ ಬಂತು. ಈ ಅಡಿಗೆ ಮನೆಯ ಸಾವುಗಳ ಹಿಂದಿನ ನಿಗೂಢತೆಯೆ ಹೀಗೆ. ನೆರೆಮನೆಯವರ ಪ್ರಕಾರ ಬೆಂಕಿ ತಾಗಿದೊಡನೆ ಶೋಭಾ ಮನೆಯಾಚೆಗೆ ಓಡಿ ಬಂದು ಕಾಪಾಡಿ ಎಂದು ಬೇಡಿದ್ದಳಂತೆ. ಆದರೆ ವಿಕ್ಟೋರಿಯಾ ಆಸ್ಪತ್ರೆ ಸೇರುವ ಮೊದಲೆ ಶೋಭಾ ಕೊನೆಯುಸಿರೆಳೆದಿದ್ದಳು.

ಮಾರ್ಚ್ 5ರ ರಾತ್ರಿ 10.30ರಲ್ಲಿ ಪೊಲೀಸರು ಬರೆಸಿಕೊಂಡಿರುವ ದೂರಿನ ಪ್ರಕಾರ : ಅಡಿಗೆ ಮಾಡುವಾಗ ಸ್ಟವ್‌ನ ಬೆಂಕಿ ಧಿಗ್ಗನೆ ಮೇಲೆದ್ದು ಪಕ್ಕದಲ್ಲಿದ್ದ ಚಿಮಣಿ ಎಣ್ಣೆಯ ಬುಡ್ಡಿಗೆ ತಾಗಿತಂತೆ, ಆ ದೀಪ ಶೋಭಾಳ ಮೇಲುರುಳಿ ಬಿದ್ದು ಅವಳ ಸೀರೆಗೆ ಹತ್ತಿಕೊಂಡ ಬೆಂಕಿ ಅವಳನ್ನು ಸಂಪೂರ್ಣವಾಗಿ ಸುಟ್ಟಿತಂತೆ.

ದೂರಿನ ಸತ್ಯಾಸತ್ಯತೆಯನ್ನು ವಿಚಾರಿಸಲು ಹೋದವರಿಗೆ; ಶೋಭಾ ಕಾಪಾಡಿ ಎಂದು ಕೂಗುತ್ತಾ ಹೊರಗೆ ಬರುವ ಮುನ್ನವೇ ಭಾರಿ ಜಗಳದ ಸದ್ದು ಕೇಳಿತು ಎಂದು ಹೇಳುವ ನೆರೆಮನೆಯವರ ಮಾತು ಹೊಸ ಅನುಮಾನವನ್ನು ಹುಟ್ಟಿಸುತ್ತದೆ. ಈ ಅನುಮಾನಗಳು ಸರಿ ಎಂದು ಸಾಬೀತು ಪಡಿಸಲು ಶೋಭಾಳನ್ನು ನುಂಗಿದವು ಎಂದು ಗುರುತಿಸಲಾದ ಸ್ಟವ್ ಮತ್ತು ಬುಡ್ಡಿಗಳು ಯಾವಾಗಲೂ ಇರುವ ಸ್ಥಳದಲ್ಲಿ ಸುಸ್ಥಿತಿಯಲ್ಲಿವೆ. ಪೊಲೀಸರಲ್ಲಿರುವ ದೂರು ಸತ್ಯವೇ ಆದರೆ ಈ ಬುಡ್ಡಿ ದೀಪ ಮತ್ತು ಸ್ಟವ್‌ಗಳ ಕಪ್ಪಿಟ್ಟಿರ ಬೇಕಿತ್ತಲ್ಲವೆ? ಇದಲ್ಲದೆ ಅದೇ ಸ್ಟವ್ವಿನ ಪಕ್ಕವೇ ನೀರು ತುಂಬಿಸಿಟ್ಟ ಬಕೆಟ್ಟುಗಳಿವೆ. ಅವುಗಳನ್ನು ಬೆಂಕಿ ಆಕಸ್ಮಿಕದ ಸಮಯದಲ್ಲಿ ಬಳಸಬಹುದಿತ್ತಲ್ಲವೆ?

ಪೊಲೀಸರ ದೂರು ಸತ್ಯಕ್ಕೆ ದೂರವಾದದ್ದು ಎಂದೆನ್ನಲು ಶೋಭಾ ಸಾಯುವ ಮುನ್ನ ನೀಡಿದ ಹೇಳಿಕೆಯ ಪ್ರತಿಯೂ ಇದೆ. ಬೆಂಕಿ ಅನಾಹುತವನ್ನು ಕಣ್ಣಾರೆ ಕಂಡವರ ಪ್ರಕಾರ ಶೋಭಾ ಮಾತಾಡುವ ಸ್ಥಿತಿಯಲ್ಲೂ ಇರಲಿಲ್ಲ. ಆದರೆ ಓದಲು ಬರೆಯಲು ಬರುತ್ತಿದ್ದ ಶೋಭಾಳ ಹೆಬ್ಬೆಟ್ಟಿನ ಗುರುತಿರುವ ಮರಣ ಪೂರ್ವ ಹೇಳಿಕೆ ಪೊಲೀಸರ ಕಡತದಲ್ಲಿದೆ.

ಇವೆಲ್ಲ ವಿವರಗಳನ್ನು ಗಮನಿಸಿದರೆ ಪೊಲೀಸರ ಪ್ರಥಮ ಪರೀಕ್ಷಣ ವರದಿ (F.I.R.) ಎಷ್ಟು ತಿರುಚಿ ಬರೆಯಲ್ಪಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕಿಂತ ಗಾಬರಿ ಹುಟ್ಟಿಸುವ ಮತ್ತೊಂದು ಸಂಗತಿ ಎಂದರೆ, ಶೋಭಾಳ ತಂದೆ-ತಾಯಿಗಳು ಸ್ವತಃ ತಹಸೀಲ್ದಾರರ ಎದುರು ಮಗಳು ಅನುಭವಿಸಿದ ದೈಹಿಕ ಹಿಂಸೆಯ ವಿವರಗಳನ್ನು ನೀಡಿದರೂ ಆ ವಿವರಗಳು ತಹಸೀಲ್ದಾರರ ವಿಶೇಷ ವರದಿಯಲ್ಲಿ ಸೇರಿಯೆ ಇಲ್ಲ!

ಬೇಕೆಂದೆ ಸತ್ಯಗಳನ್ನು ತಿರುಚಿ, ವಿವರಗಳನ್ನು ಕೈಬಿಟ್ಟು ವರದಿ ರಚಿಸುವವರಿರುವಾಗ ನ್ಯಾಯ ಉಳಿದೀತೆ?

ವಿಮೋಚನಾ ಮಹಿಳಾ ಹಕ್ಕುಗಳ ವೇದಿಕೆ

ಓದುಗರಿಗೊಂದು ಮನವಿ

ಕಳೆದ ಹನ್ನೆರಡು ವರ್ಷಗಳಿಂದ 'ಮಾನಸ' ತಿಂಗಳ ಪತ್ರಿಕೆಯನ್ನು ಓದುಗರ ಹಾಗೂ ಸಹೃದಯರ ಸಹಕಾರದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ವಿದೇಶಿ ಸಂಸ್ಥೆಯ ಹಾಗೂ ಸರ್ಕಾರದ ನೆರವಿಲ್ಲದೆ ಸ್ವಾಯತ್ತವಾಗಿ ಮಹಿಳೆಯರೇ ಮಾನಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದೇವೆ. ಕರ್ನಾಟಕದ ಮಹಿಳಾ ಚಳುವಳಿಯಲ್ಲಿ ಮಾನಸದಂತಹ ಪತ್ರಿಕೆಯ ಪಾತ್ರ ಮಹತ್ತರವಾದುದೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆಯನ್ನು ಇದುವರೆಗೆ ನೀರೆರೆದು ಪೋಷಿಸಿದವರು ನೀವು.

ಚಂದಾವನ್ನು ಸಕಾಲದಲ್ಲಿ ನವೀಕರಿಸುವುದರೊಂದಿಗೆ ಮಾನಸ ಪತ್ರಿಕೆಗೆ ಹಾಗೂ ಮಾನಸದ ಚಟುವಟಿಕೆಗಳಿಗೆ ವರ್ಷಕ್ಕೆ 100/- ರೂ. ಕೊಡುಗೆಯಾಗಿ ನೀಡಬೇಕೆಂದು ಓದುಗರನ್ನು ಕೋರುತ್ತೇವೆ. ನೀವು ನೀಡುವ ಈ ನೆರವು ಮಾನಸವನ್ನು ಬೆಳೆಸುವಲ್ಲಿ ನೆರವಾಗುತ್ತದೆ.

– ಸಂ. ಮಂ.

ನೀನು ಓದಿ ಹೇಗೆ ಮುಂದೆ ಬರುತ್ತೀಯೋ ನೋಡುತ್ತೇನೆ

ಈ ಘಟನೆಯನ್ನು ದಿನಾಂಕ 27.11.98ರಂದು Lesser Human ಕಿರುಚಿತ್ರ ತೋರಿಸಿದ ನಂತರ ಆದ ಚರ್ಚೆಯ ಸಂದರ್ಭದಲ್ಲಿ ಶ್ರೀ ಮಾರ್ಟಿನ್ ಅವರು ಹೇಳಿದರು. ಅವರು 'ನವ್‌ಸರ್‌ಜನ್' ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಸಂಸ್ಥೆಯು ಗುಜರಾತಿನ ಭಂಗಿ ಜನರ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದೆ. ಭಂಗಿ ಜನರ ಬದುಕು-ಹೋರಾಟ ಕುರಿತು ಶ್ರೀ ಸ್ಟಾಲಿನ್ ಅವರು ಮಾಡಿರುವ Lesser Human ಎಂಬ ಕಿರುಚಿತ್ರವನ್ನು ಕುರಿತು ಮಾನಸದ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಶಾಲೆಗೆ ಹೋದ ಪುಟ್ಟನಿನ್ನು ಮನೆಗೆ ಬಂದಿಲ್ಲ. ಗಂಟೆ ಆರಾಯಿತು, ಏಳಾಯಿತು, ಎಲ್ಲಾ ಮಕ್ಕಳು ಮನೆಗೆ ಬಂದಾಯಿತ್ತು. ಅವ್ವ-ಅಪ್ಪನಿಗೆ ಚಿಂತೆಯಾಯ್ತು. ಅಕ್ಕಪಕ್ಕದ ಮನೆಯಲ್ಲಿ ಹುಡುಕಿದರು. ಸುತ್ತೆಲ್ಲ ಹುಡುಕಾಡಿದರು. ಎಲ್ಲಿ ಹೋದ ಪುಟ್ಟು?

ಯಾರೊ ಬಂದು ಸುದ್ದಿ ಕೊಟ್ಟರು - ರೈಲ್ವೆ ಹಳಿಯ ಬಳಿ ಪುಟ್ಟ ಹುಡುಗನದೊಂದು ಹೆಣ ಬಿದ್ದಿದೆ. ನಿಮ್ಮದೇನೊ ಬಂದು ನೋಡಿ. ಅವ್ವ-ಅಪ್ಪ ಎದೆ ಬಡಿತ ಎಣಿಸುತ್ತ, ಮುಖ ಮೇಲೆ ಮಾಡಿ ಕಾಪಾಡು ಎಂದು ಕೈ ಮುಗಿಯುತ್ತಾ ಹೊರಟರು. ಕೈ ಮುಗಿಸಿಕೊಂಡವನ ಕಿವಿ ಕಿವುಡಾಗಿತ್ತು. ಬಿದ್ದಿದ್ದ ಹೆಣ ಪುಟ್ಟುನದೇ. ಹೆಣವಲ್ಲ ಚೆಲ್ಲಾಪಿಲ್ಲಿಯಾಗಿದ್ದ ದೇಹದ ನಾಲ್ಕು ತುಂಡುಗಳು. ತುಂಡುಗಳನ್ನ ಜೋಡಿಸಿ ಹೆಣ ಮಾಡಿ ಪರೀಕ್ಷೆಗೆಂದು ಆಸ್ಪತ್ರೆಗೆ ಒಯ್ದರು. ತುಂಡುಗಳನ್ನು ಕೊಯ್ದು ಪರೀಕ್ಷೆ ಮಾಡಿದರು. ಒಂದು ತುಂಡಿನೊಳಗೆ ಚೆಡ್ಡಿಯ ತುಂಡು, ತುಂಡಿನೊಳಗೊಂದು ಜೇಬು, ಜೇಬಿನಲ್ಲೊಂದು ಪುಟ್ಟನದೊಂದು ದೊಡ್ಡ ಕಾಗದ! ಪುಟ್ಟುನ ಎದೆಯೊಳಗಿನ ನೋವುಗಳು ಅಕ್ಷರಗಳಾಗಿದ್ದವು.......

ಇಂದು ಬೆಳಗ್ಗೆ ಶಾಲೆಯ ಅಂಗಳದಲ್ಲಿ ಎಲ್ಲ ಹುಡುಗರು ಆಡುತ್ತಿದ್ದರು. ಆಡುತ್ತಾ ಆಡುತ್ತಾ ಹುಡುಗರು ಮಾಸ್ತರರೊಬ್ಬರ ಸ್ಕೂಟರನ್ನು ಉರುಳಿಸಿದರು. ಮಾಸ್ತರು ಬರುವ ವೇಳೆಗೆ ಎಲ್ಲ ಹುಡುಗರು ಓಡಿದರು. ಅಲ್ಲೇ ಇದ್ದೆ ಎಂದು ಮಾಸ್ತರರು ನನ್ನ ಹಿಡಿದುಕೊಂಡರು. ಬೈಯಲ್ಲಿಲ, ಹೊಡೆಯಲಿಲ್ಲ, ಹೋಗಿ ನಿನ್ನಪ್ಪನನ್ನು ಕರೆದುಕೊಂಡು ಬಾ ಎಂದರು. ಓಡಿ ಹೋದೆ, ಎಲ್ಲೋ ಮೋರಿ ಗುಡಿಸುತ್ತಿದ್ದ ಅಪ್ಪನನ್ನು ಕರೆದುಕೊಂಡು ಬಂದೆ.

ಮಾಸ್ತರರು ಅಪ್ಪನಿಗಂದರು - ನಿನ್ನ ಮಗ ಮಾಡಿದ ತಪ್ಪಿಗೆ ಅವನನ್ನು ಶಾಲೆ ಬಿಡಿಸುತ್ತೇವೆ. ಅಪ್ಪ ಕಣ್ಣೀರು ಹಾಕುತ್ತ "ಹಾಗೆ ಮಾಡಬೇಡಿ ದಣಿ. ಇರುವನೊಬ್ಬ ಮಗ, ತಪ್ಪಿಗೆ ಎಂತ ಶಿಕ್ಷೆಯಾದರೂ ಕೊಡಿ, ಶಾಲೆ ಬಿಟ್ಟು ಕಳಿಸಬೇಡಿ. ನನ್ನ ನನ್ನ ಹೆಂಡತಿಯದೊಂದೇ ಆಸೆ, ಅವ ಓದಿ, ಒಳ್ಳೆ ಬದುಕು ನಡೆಸಬೇಕೆಂದು". ಮಾಸ್ತರರು ಸಾಧ್ಯವೇ ಇಲ್ಲ, ನಿನ್ನ ಮಗನನ್ನು ಕರೆದುಕೊಂಡು ಹೋಗು ಎಂದರು. ಅಪ್ಪ ಗೋಳಾಡಿದ, ಬಾಗಿ ಬೇಡಿದ, ಮನ್ನಿಸಿರೆಂದು ಕಾಲಿಡಿದುಕೊಂಡು ಕಣ್ಣೀರು ಹರಿಸಿದ. ಏನನಿಸಿತೊ ಮಾಸ್ತರರು ಸರಿ ಸರಿ ನೀನು ಹೋಗು ಎಂದರು. ಅಪ್ಪನಿಗೆ ಹಾಲನ್ನ ಉಂಡಷ್ಟು ಸಂತೋಷ.

ಕ್ಲಾಸಿನೊಳಗೆ ಹೋಗಿ ಕೂತೆ. ಮಾಸ್ತರರು ಬಂದರು. ಬಂದು ಬಾಣದಂತೆ ನೋಡುತ್ತಾ "ನೀನು ಓದಿ ಹೇಗೆ ಮುಂದೆ ಬರುವೆ ಎಂದು ನೋಡಿಕೊಳ್ಳುವೆ" ಎಂದರು. ಹೇಲು ಗುಡಿಸುವಾಗ ಹೇಲು ಕೈಗೆ ತಗುಲಿದಂತಾಯ್ತು. ಮಾಸ್ತರರು ನೆಟ್ಟಗೆ ನಿಂತು ನೇರವಾಗಿ ನನ್ನನ್ನೆ ನೋಡುತ್ತಾ ಹೇಳಿದ್ದು ಸುಳ್ಳಲ್ಲ. ಶಾಲೆ ಗಂಟೆ ಬಾರಿಸಿತು. ನಿಜ, ಮಾಸ್ತರರು ಹೇಳಿದ ಮೇಲೆ ಮುಗಿಯಿತು.

ಶಾಲೆಯಿಂದ ಹೊರ ಬಂದೆ. ಕಾಲೆಳೆಯುತ್ತಾ ಹೊರಟೆ. ಮಾಸ್ತರರು ಹೇಳಿದ ಮಾತೇ ಕಿವಿಗೆ ಬಡಿಯುತ್ತಿತ್ತು. ಮಾಸ್ತರರು ನನ್ನ ಬಡದಿದ್ದರೂ ಬೇಸರವಾಗುತ್ತಿರಲಿಲ್ಲ. ಅವರು ಅಪ್ಪನನ್ನು ನಡೆಸಿಕೊಂಡ ರೀತಿಗೆ ಸಂಕಟವಾಯಿತು. ಹೇಗೆ ಓದಿ ಮುಂದೆ ಬರುತ್ತೀಯೋ ನೋಡುತ್ತೇನೆಂದುದಕ್ಕೆ ತುಂಬಾ ನೋವಾಯಿತು. ಮಾಸ್ತರರು ಹಾಗೆಂದ ಮೇಲೆ ನಾನು ಓದಿದಂತೆ. ಕಲಿಸುವ ಮಾಸ್ತರರೇ ನೋಡಿಕೊಳ್ಳುವೆನೆಂದ ಮೇಲೆ ಓದಿನ ಕತೆ ಮುಗಿದಂತೆ. ಓದಿನ ಕತೆ ಮುಗಿದರೆ ಉಳಿದಿರುವುದೊಂದೆ, ಹೇಲು ಬಳಿಯುವುದು. ರಾತ್ರಿ ಸಾವ್ಕಾರರ ಮನೆಗೆ ಹೋಗಿ ಅನ್ನ ಹಾಕಿರೆಂದು ಬೇಡಿ ಪಾತ್ರೆಗೆ ಅನ್ನ ಹಾಕಿಸಿಕೊಳ್ಳುವುದು, ಹೇಲಿನ ಗಬ್ಬು ವಾಸನೆ, ಎತ್ತಲು ನೆಟ್ಟಗಿನ ಪರಕೆಯೂ ಇಲ್ಲದೆ ಕೈಗೇ ತಗುಲುವ ಹೇಲು. ಹೊಲಸಿನ ಮೋರಿಯೊಳಗಿಳಿದು, ಕಟ್ಟಿಕೊಂಡಿರುವುದನ್ನ

ತೆಗೆಯುವುದು. ಇಂತ ಹೊಲಸು ಕೆಲಸ ಮಾಡಿಸಿಕೊಂಡರೂ ಅನ್ನ ಕೊಡುವಾಗ ಮೇಲಿಂದ ತಪ್ ಎಂದು ಅನ್ನ ಬೀಳಿಸುವ ಸಾಹ್ಕಾರ್ತಿ. ಬೇಡ ಮತ್ತೆ ಆ ಹೊಲಸಿನ ಬದುಕು ನನಗೆ ಬೇಡ. "ಓದಿ ದೊಡ್ಡವನಾಗಿ, ಗುಮಾಸ್ತನಾಗಿ ಸಂಬಳ ಎಣಿಸಿಕೊಳ್ಳಬೇಕು. ಅಪ್ಪ-ಅವ್ವನ ಕೈಲಿ ಹೇಲು ಬಲಿಸುವ ಕೆಲಸ ಬಿಡಿಸಬೇಕು. ಇರುವ ಗುಡಿಸಲನ್ನ ಪುಟ್ಟ ಮನೆ ಮಾಡಿ, ಮನೆಯಲ್ಲಿ ಮಾರ್ಟಿನ್ ಅಣ್ಣನ ಮನೆಯಲ್ಲಿರುವಂತ ಕಕ್ಕಸು ಮನೆ ಕಟ್ಟಿಸಬೇಕು" - ಇನ್ನೆಂದೂ ಆ ಆಸೆ ಪೂರೈಸದು. ಮಾಸ್ತರರು ಬಾಣದಂತೆ ನೋಡುತ್ತ ನೋಡಿಕೊಳ್ಳುವೆನೆಂದ ಮೇಲೆ ಓದಿನ ಕತೆ ಮುಗಿದಂತೆ. ಓದಿಲ್ಲದ ಮೇಲೆ ಇನ್ನೆಂತ ಬದುಕು. ಹೇಲು ಬಳಿಯುವುದೊಂದು ಬದುಕೆ. ಆ ಬದುಕು ಬೇಡ ನನಗೆ. ಹಾಗೆ ಬದುಕುವುದಕ್ಕಿಂತ ಸಾಯುವುದೇ ಮೇಲು. ಅವ್ವ-ಅಪ್ಪ ನನ್ನನ್ನ ಕ್ಷಮಿಸಿರಿ.

ಪುಟ್ಟ ಹುಡುಗನೊಬ್ಬನ ಓದುವ ಆಸೆ, ಅವನ ಎಳೆಯ ದೇಹದೊಂದಿಗೆ ರೈಲ್ವೆ ಹಳಿಯ ಮೇಲೆ ಛಿದ್ರವಾಯಿತು. ಯಾವುದೋ ಕಾಲದಲ್ಲಲ್ಲ, ಸುವರ್ಣ ಸ್ವತಂತ್ರ ಭಾರತದಲ್ಲಿ. ಛಿದ್ರಗೊಂಡ ಎಳೆಯ ಕನಸು ಕಣ್ಣಲ್ಲಿರುವಾಗ ಶಿಕ್ಷಣ ಕುರಿತು ಕನಸೆಲ್ಲಿ ಕಾಣಲಿ?

- ಸರಸ್ವತಿ ದು.

ಸಂಕಟ ದಿನಗಳಲ್ಲಿ

ಹವಾಗುಣ ಅಷ್ಟೇನೂ
ಹಿತವಾಗಿಲ್ಲ
ಕಾರ್ಗತ್ತಲು, ಧೂಳು ಮೋಡಗಳು
ಭಯಂಕರ ಬಿರುಗಾಳಿ
ಈ ಸಂಕಟದ ದಿನಗಳಲ್ಲಿ
ಅನಿರೀಕ್ಷಿತ ಘಟನೆಗಳು
ಘಟಿಸುತ್ತಲೇ ಇರುತ್ತವೆ
ಕಾಲಿಲ್ಲದ ಕಪೋಲ ಕಲ್ಪಿತ ಸುದ್ದಿಗಳು
ಭೀತಿ ಮೋಡಗಳನ್ನು ಕವಿಸುತ್ತವೆ.
ವಾತಾವರಣದ ಕೊರಳು ಹಿಂಡುತ್ತವೆ
ಅವಿಶ್ವಾಸದಲೆಯ ಸಾಗರ
ಅನಿಶ್ಚಿತತೆ, ಆತಂಕಗಳ
ಕ್ಷಿತಿಜದಲಿ ಹರಡುತ್ತದೆ
ಎಷ್ಟು ವಿಚಿತ್ರವಾಗಿದೆ!!
ಇಲ್ಲಿ ಮನುಷ್ಯ ಸಾಯುವುದಿಲ್ಲ
ಹಿಂದೂಗಳು ಸಾಯುತ್ತಾರೆ
ಸಿಕ್ಖರು ಸಾಯುತ್ತಾರೆ
ಸೃಜನ ಕರ್ಮಿಗಳು ಸಾಯುತ್ತಾರೆ !!
ಎಲ್ಲೆಲ್ಲೂ ಮುರಿದ ಮನೆ
ಉಕ್ಕುವ ಬಿಕ್ಕುಗಳು
ಶೃಂಗಾರಗೊಂಡ ಕಾಡಿಗೆ ಕಣ್ಣುಗಳಲ್ಲಿ
ಭೀತಿ, ಸಾವಿನ ಭಾವ
ರಕ್ತದಲಿ ತೊಯ್ದ ಕನಸುಗಳ
ಆಕಾಶದಡಿಯಲ್ಲಿ
ಸಂಕಟದ ದಿನಗಳಲ್ಲಿ
ಹೇಗೆ ಬದುಕುತ್ತಿದ್ದೇವೆ - ನಾವು!!

ಮೂಲ : ಬಲ್‌ಬೀರ್ ಪರವಾನಾ
ಅನುವಾದ : ಡಾ. ವಿಜಯಾ ಸುಬ್ಬರಾಜ್

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ

ಸಂ. ಮಂಡಳಿ

REGD No. KRNA 324

BOOK-POST
PRINTED MATTER

560 025.



ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067